ಶ್ರೀ ಎಂ. ವೀರಪ್ಪ ಮೊಯಿಲಿ.—ತಮಗೆ ರೂಲಿಂಗ್‌ಗೆ ಸಹಕಾರ ಆಗುವುದಕ್ಕೆ ನನ್ನ ಉದ್ದೇಶವನ್ನೂ ಹೇಳಬೇಕಲ್ಲ ತಾವು ವಿಕಪಕ್ಷೀಯಂವಾಗಿ ಈ ಬಗ್ಗೆ ನಿರ್ಧಾರಕ್ಕೆ ಬರುವುದಕ್ಕೆ ಆಗುವುದಿಲ್ಲ.....

ಅಧ್ಯಕ್ಷರು.—ನಾನೇನು ದಡ್ಡನಲ್ಲ ಬಿ.ಎ. ಎಲ್.ಎಲ್.ಬಿ. ಮಾಡಿಕೊಂಡು, ವಕೀಲನಾಗಿ ಕೆಲಸ ಮಾಡಿದ್ದೇನೆ ನಿಮಗೂ ಅನ್ಯಾಯ ಆಗದ ಹಾಗೆ ಅವರಿಗೂ ಅನ್ಯಾಯ ಆಗದ ಹಾಗೆ ನೋಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆದರೂ ಸಹ ತಾವು ಎರಡೂ ಕಡೆ ವಾದವನ್ನೂ ಕೇಳಬೇಕು.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ ನನಗೆ ಗೊತ್ತಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇಲ್ಲಿ ಬಿ.ಎ. ಎಲ್.ಎಲ್.ಬಿ. ಆಗತ್ಯ ಇಲ್ಲ It needs only common sense. ಪಾಯಿಂಟ್ ಆಫ್ ಆರ್ಡರ್ ಎತ್ತಲು, ಎದ್ದು, ಎದ್ದು ಕುಳಿತು ಕೊಳ್ಳುವುದಕ್ಕೂ ಒಂದು ವಿತಿ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಕೊಡುವುದಕ್ಕೆ ಅನುಮತಿ ಕೊಟ್ಟಿದ್ದೀರಿ, ನಾವು ಕೊಡುತ್ತೇವೆ. ಅವರ ವಾದವನ್ನು ಕೇಳುವುದಕ್ಕೆ ತಮಗೆ ಸಾರ್ವಭೌಮ ಅಧಿಕಾರ ಇದೆ ಅವರೊಬ್ಬರ ವಾದವನ್ನು ಕೇಳಿ ಮಂತ್ರಿಯೊಂದು ಕಡೆಯ ವಾದವನ್ನು ಕೇಳಬಾರದೆಂದು ತಾವು ಹೇಳಿದರೂ ಸಹ ನಾವು ಸುಮ್ಮನೆ ಕೂಡುತ್ತೇವೆ.

ಅಧ್ಯಕ್ಷರು.—ಅನ್ ಪಾರ್ಲಿಮೆಂಟರಿ ಪದವನ್ನು ಯಾರು ಉಪಯೋಗ ಮಾಡಿದರೂ ಕೂಡ ಅದನ್ನು ನಾನೂ, ಇದು ಅನ್ ಪಾರ್ಲಿಮೆಂಟರಿ ಎಂದು ಹೇಳಿ ಎಕ್ಸ್‌ಪಂಜ್ ಮಾಡುವ ಅಧಿಕಾರ ನನಗಿದೆ. ಅದಕ್ಕೂ ಮೊದಲು ಯಾವುದು ಅನ್ ಪಾರ್ಲಿಮೆಂಟರಿ ಎಂಬುದನ್ನು ನೋಡುವುದು ನನ್ನ ಕರ್ತವ್ಯ.

ಶ್ರೀ ಎಂ. ವೀರಪ್ಪ ಮೊಯಿಲಿ.— ತಾವು "ಹೌದು" ಎನ್ನುವ ವಾದ ಕೇಳಿದ್ದೀರಿ. ಹಾಗೆಯೇ, "ಅಲ್ಲ" ಎನ್ನುವ ವಾದ ಕೇಳಬಾರದು, ನೀವು ಕೂಡಿ ಎಂದರೆ ನಾವು ಕೂಡುತ್ತೇವೆ. ಎರಡೂ ಕಡೆ ವಾದ ಕೇಳಬೇಕಾದ ಅವಶ್ಯಕತೆ ಇಲ್ಲ, ಒಂದೇ ಕಡೆ ವಾದ ಕೇಳುವುದು ಎಂದು ತಾವು ಹೇಳಿದರೆ, ಶ್ರೀ ತಿಮ್ಮೇಗೌಡರು ಹೇಳಿದ ವಿಷಯದಲ್ಲಿ ಪುಷ್ಟಿ ಇಲ್ಲ ಎಂದು ತಿಳಿದುಕೊಂಡೂ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು. — ಆಯಿತ , ಕುಳಿತುಕೊಳ್ಳಿ.

4. ಬೆಂಗಳೂರಿನ ನಂದಿನಿ ಲೇ ಔಟಿನ ಸಮೀಪದಲ್ಲಿರುವ ಜಾರಕ ಬಂಡೆ ಕಾವಲಿನಲ್ಲಿ ಅನಧಿಕೃತವಾಗಿ ಕಟ್ಟಿರುವ ಮನೆಗಳನ್ನು ಕೆಡವಿಹಾಕಿರುವುದು.

ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).— ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ನಂದಿನಿ ಲೇಔಟ್‌ನ ಸಮೀಪದಲ್ಲಿರುವ ಜಾರಕ ಬಂಡೆ ಕಾವಲಿನಲ್ಲಿ ಅನಧಿಕೃತವಾಗಿ ಕಟ್ಟಿದ ಸುಮಾರು ೨೧೦ ಮನೆಗಳನ್ನು ಕೆಡವಿ ಹಾಕಿರುವ ಬಗ್ಗೆ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಸನ್ಮಾನ್ಯ ಅಧ್ಯಕ್ಷರೇ,

ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಂ ನಂದಿನಿ ಬಡಾವಣೆ ಸಮೀಪದ ಜಾರಕ ಬಂಡೆ ಕಾವಲಿನಲ್ಲಿ ಅಧಿಕೃತವಾಗಿ ಕಟ್ಟಿದ್ದ ಯಾವ ಮನೆಗಳನ್ನೂ ಒಡೆದು ಹಾಕಿರುವುದಿಲ್ಲ. ಆದರೆ ಮಂಡಳಿಗೆ ಸೇರಿದ ಲಗ್ಗೆರೆ ಗ್ರಾಮದ ೧೧೫ನೆಯ ಮತ್ತು ೧೨ನೇ ಸರ್ವೆ ನಂಬರಿನ ಜಮೀನಿನಲ್ಲಿದ್ದ ೫೭ ಸಣ್ಣ ಮನೆಗಳನ್ನು ದಿನಾಂಕ. ೧೭-೨-೧೯೮೭ರಂದು ಒಡೆದಂ ಹಾಕಲಾಗಿದ್ದು, ಇದರ ವಿವರಗಳು ಈ ಕೆಳಕಂಡಂತಿವೆ,

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ೫೯ ಎಕರೆ ೨೮ ಗುಂಟೆ ವಿಸ್ತೀರ್ಣದ ಲಗ್ಗೆರೆ ಗ್ರಾಮಕ್ಕೆ ಸೇರಿದ ೧೧ ಮತ್ತು ೧೨ನೇ ಸರ್ವೆ ನಂಬರಿನ ಜಮೀನನ್ನು (ಸರ್ವೆ ನಂಬರ್ ೧೧ರಲ್ಲಿ ೩೫ ಎಕರೆ ೫ ಗುಂಟೆ ಹಾಗೂ ಸರ್ವೆ ನಂಬರ್ ೧೨ರಲ್ಲಿ ೨೪ ಎಕರೆ ೨೩ ಗುಂಟೆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ೮ ೮೫ ಲಕ್ಷ ರೂ. ಗಳಿಗೆ ಪಡೆದಿರುತ್ತದೆ. ಈ ಜಮೀನನ್ನು ಬೆಂಗಳೂರು ಅಭಿವೃದ್ಧಿ

ಪ್ರಾಧಿಕಾರದ ಅಧಿಕಾರಿಗಳು ಹಾಗೂ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಅಧಿಕಾರಿಗಳು ದಿನಾಂಕ. ೧೮–೧೦–೧೯೮೨ರಂದು ಜಂಟಿಯಾಗಿ ಆಳತೆಗಳನ್ನು ಮಾಡಿ ಹದ್ದುಬಸ್ತುಗಳನ್ನು ನಿಗದಿಪಡಿಸಿದ ನಂತರ ಪ್ರಾಧಿಕಾರವು ಮಂಡಳಿಯ ಸ್ವಾಧೀನಕ್ಕೆ ಕೊಟ್ಟಿರುತ್ತದೆ.

ಸದರಿ ಜಮೀನಿನಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ನಗರದ ವಿವಿಧ ಭಾಗಗಳಲ್ಲಿ ವಾಸಿಸುವ ಕೊಳಚೆ ನಿವಾಸಿಗಳ ಪುನರ್ ವಸತಿಗಾಗಿ ೪,೭೦೦ ಮನೆಗಳ ನಿರ್ಮಾಣದ ಕಾರ್ಯಕ್ರಮವನ್ನು ಹೊಂದಿದ್ದು, ಮೊದಲನೇ ಹಂತದಲ್ಲಿ ೨೪೦ ಮನೆಗಳನ್ನು ಈಗಾಗಲೇ ಕಟ್ಟಲಾಗಿದ್ದು, ಈ ಮನೆಗಳನ್ನು ಅರ್ಹರಾದ ಕೊಳಚೆ ನಿವಾಸಿಗಳಿಗೆ ನೀಡಲಾಗುತ್ತಿದೆ. ಇದಲ್ಲದೆ ಸಂಪಾರಂ ೨ ಕೋಟಿ ರೂಪಾಯಿಗಳ ವೆಚ್ಚದಲ್ಲಿ ೯೯೬ ಟೆನ್‌ಮೆಂಟುಗಳ ನಿರ್ಮಾಣದ ಕೆಲಸವನ್ನು ಆರಂಭಿಸಲಾಗಿದೆ. ಈ ಎಲ್ಲಾ ಮನೆಗಳನ್ನು ನಗರದ ವಿವಿಧ ಭಾಗಗಳಲ್ಲಿ ವಾಸಿಸುತ್ತಿರುವ ಕೊಳಚೆ ನಿವಾಸಿಗಳಿಗೆ ಪುನರ್ ವಸತಿ ಕಲ್ಪಿಸಲು ಯೋಜಿಸಲಾಗಿದೆ.

ಈ ಮಧ್ಯೆ ೧೯೮೨ರಲ್ಲಿ ಕೆಲವರು ಈ ಜಾಗವನ್ನು ಜಾರಕಬಂಡೆ ಕಾವಲಿನ ಸರ್ವೆ ನಂಬರಿಗೆ ಸೇರಿದ್ದೆಂದು ವಾದಿಸುತ್ತಾ ಅನಧಿಕೃತವಾಗಿ ಮನೆಗಳನ್ನು ಕಟ್ಟಲು ಪ್ರಯತ್ನ ಮಾಡುತ್ತಿದ್ದರು. ಸರ್ವೆ ಸೆಟಲ್‌ಮೆಂಟ್ ಅಂಡ್ ಲ್ಯಾಂಡ್ ರೆಕಾರ್ಡ್ಸ್ ಅಧಿಕಾರಿಗಳು ದಿನಾಂಕ. ೧೪–೧೨–೧೯೮೨ರಂದು ಸದರಿ ಜಮೀನನ್ನು ಅಳತೆ ಮಾಡಿ, ಹದ್ದುಬಸ್ತುಗಳು ಸರಿಯಾಗಿ ಇರುವುದಾಗಿಯೂ, ಸದರಿ ಜಮೀನಿನಲ್ಲಿ ೧೫ ಅನಧಿಕೃತ ಮನೆಗಳು ಇರುವುದಾಗಿಯೂ ತಿಳಿಸಿದರು. ಈ ಅನಧಿಕೃತ ಮನೆಗಳನ್ನು ಕಟ್ಟಿದ್ದವರಿಗೆ ಹಾಗೂ ಕಟ್ಟಲು ಪ್ರಯತ್ನ ಪಡುತ್ತಿದ್ದವರಿಗೆ ಆಗಿಂದಾಗ್ಗೆ ಜಾಗವನ್ನು ಖಾಲಿ ಮಾಡುವಂತೆ ಎಚ್ಚರಿಕೆ ನೀಡುತ್ತಿದ್ದುದ್ದಾಗ್ಯೂ ಈ ಅನಧಿಕೃತ ಕಟ್ಟಡಗಳು ಹೆಚ್ಚುತ್ತಾ ಬಂದಿದ್ದವು.

ಮತ್ತೊಮ್ಮೆ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಲ್ಯಾಂಡ್ ರೆಕಾರ್ಡ್ಸ್ ಅವರು ಸದರಿ ಜಮೀನಿನ ಸರ್ವೆಯನ್ನು ಸಾರ್ವಜನಿಕರುಗಳ ಸಮಕ್ಷಮದಲ್ಲಿ ಮಾಡಿಸಿ ದಿನಾಂಕ. ೪–೬–೧೯೮೬ರಂದು ಹದ್ದುಬಸ್ತುಗಳನ್ನು ಪುನಃ ಖಚಿತಪಡಿಸಿದರು.

ಈ ರೀತಿ ಹದ್ದುಬಸ್ತುಗಳನ್ನು ಖಚಿತಗೊಳಿಸಿದ ಮೇಲೆ ಆ ಜಾಗಗಳಲ್ಲೇ ಕಟ್ಟಿದ್ದ ಮತ್ತು ಕಟ್ಟಲಾಗುತ್ತಿದ್ದ ಅನಧಿಕೃತ ಕಟ್ಟಡಗಳನ್ನು ತೆಗೆದುಹಾಕುವ ಬಗ್ಗೆ ಮಂಡಳಿಯು ಪ್ರಯತ್ನವನ್ನು ನಡೆಸುತ್ತಲೇ ಬಂದಿರುತ್ತದೆ. ನಂತರ ಅನಧಿಕೃತ ನಿವೇಶನಗಳಲ್ಲಿ ಇರುವವರಿಗೆ ಕೊಳಚೆ ನಿರ್ಮೂಲನಾ ಮಂಡಳಿಯು ಸದರಿ ಅನಧಿಕೃತ ಕಟ್ಟಡಗಳನ್ನು ಒಡೆದು ಹಾಕುವುದಾಗಿ ನೋಟೀಸು ಕೊಟ್ಟಿದ್ದರೂ ಸಹಾ ಅವರು ತೆರವು ಮಾಡಲಿಲ್ಲ. ಆದುದರಿಂದ ಕೊನೆಗೆ ದಿನಾಂಕ. ೧೭–೨–೧೯೮೭ರಂದು ೫೭ ಅನಧಿಕೃತ ಕಟ್ಟಡಗಳನ್ನು ತೆಗೆದುಹಾಕಲಾಗಿರುತ್ತದೆ.

ಈ ಮೇಲಿನ ಅಂಶಗಳಿಂದ ತಿಳಿದು ಬರುವುದೇನೆಂದರೆ ಯಾವುದೇ ಕಟ್ಟಡಗಳನ್ನು ಜಾರಕಬಂಡೆ ಕಾವಲ್‌ನಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ತೆರವು ಮಾಡಿರುವುದಿಲ್ಲ.

† ಶ್ರೀ ಕೆ. ಹೆಚ್. ಶ್ರೀನಿವಾಸ್.— ಮಾನ್ಯ ಅಧ್ಯಕ್ಷರೇ, ಸಂಪೂರ್ಣವಾಗಿ ಸತ್ಯಕ್ಕೆ ದೂರವಾದಂಥ ಒಂದು ವರದಿಯನ್ನು ಹಾಗೂ ಅಧಿಕಾರಿಗಳು ಕಳುಹಿಸಿರುವುದನ್ನು ಯಥಾವತ್ತಾಗಿ ಮಾನ್ಯ ಮಂತ್ರಿಗಳು ಶ್ರದ್ಧೆಯಿಂದ ಓದಿದ್ದಾರೆ. ಬಹುಶಃ ಮಂತ್ರಿಗಳು ಅಲ್ಲಿಗೆ ಹೋಗಿ ಅಲ್ಲಿ ಯಾವರೀತಿ ಕಾರ್ಯಕ್ರಮ ನಡೆಸಿದ್ದಾರೆ ಎಂದು ನೋಡಲು, ಅವರಿಗೆ ಪುರಸೊತ್ತಾಗುವುದಕ್ಕೆ ಸಾಧ್ಯವಿಲ್ಲ. ಇದರಿಂದ ಅವರು ನೋಡಿಲ್ಲ ಎಂದು ನನ್ನ ಭಾವನೆ. ನಾನು ಸ್ವತಃ ಹೋಗಿ ನೋಡಿದ್ದೇನೆ. ಎಷ್ಟು ಮನೆಗಳನ್ನು ಯಾವ ಒಂದು ಅವಾನಂಷವಾದ ರೀತಿಯಲ್ಲಿ ಒಡೆದು ಹಾಕಿದ್ದಾರೆ ಎಂದು ಹೇಳಿ, ಸ್ವತಃ ಸುಮಾರು ಎರಡುತಾಸಂ ಅಷ್ಟೂ ಮನೆಗಳಿಗೆ ಹೋಗಿ, ಇಡೀ ವಿಸ್ತೀರ್ಣವನ್ನು ತಿರುಗಾಡಿ, ಜನರ ಹತ್ತಿರ ಏನು ಸಬೂಬು ಇದೆ, ಏನೆಲ್ಲಾ ಕಾಗದಪತ್ರಗಳು ಇದ್ದಾವೆ ಅವೆಲ್ಲವನ್ನೂ ಕೂಡಾ ನಾನು ಸ್ವತಃ ಪರಿಶೀಲನೆ ಮಾಡಿದ್ದೇನೆ. ನನಗೆ ಜವಾಬ್ದಾರಿ ಇದೆ. ಜೇಜವಾಬ್ದಾರಿಯಿಂದ ಯಾವುದೇ ವಿಷಯವನ್ನೂ ಇಲ್ಲಿ ಪ್ರಸ್ತಾಪ ಮಾಡತಕ್ಕ ಅಭ್ಯಾಸ ಕೂಡಾ ನನಗೆ ಅಷ್ಟಾಗಿ ಇಲ್ಲ ಆದಕ್ಕಾಗಿಯೇ ಅಧಿಕೃತವಾದ ಕಟ್ಟಡಗಳು ಎಂದು ನಾನು ನನ್ನ ನೋಟೀಸ್‌ನಲ್ಲಿ ತಿಳಿಸಿದ್ದೇನೆ. ಮಾನ್ಯ ಅಧ್ಯಕ್ಷರೇ, ಇಲ್ಲಿರತಕ್ಕಂಥ ಒಂದೇ ತಾತ್ಪರ್ಯ ಏನೆಂದರೆ, ಇದು ಜಾರಕಬಂಡೆ ಕಾವಲ್ ಸರ್ವೆ ನಂಬರ್ ೧ ಯಾವುದು, ಸರ್ವೆ ನಂಬರ್ ೧೧, ೨೨ ಯಾವುದು. ಲಗ್ಗೆರೆ ಸರ್ವೆ ನಂಬರ್ ೧೧, ೧೨ ಯಾವುದು ಇದೇ ಮೂಲಭೂತವಾಗಿರತಕ್ಕಂಥ

ಪ್ರಶ್ನೆ. ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಮತ್ತು ಕೊಳಚೆ ನಿರ್ಮೂಲನಾ ಮಂಡಲಿಯವರು ಸೇರಿಕೊಂಡು ಯಾವುದಾದರೂ ಒಂದು ಜಮೀನನ್ನು, ತಮಗೆ ಸೇರದಿರತಕ್ಕಂಥ ಜಮೀನನ್ನು ವಿನಿಮಯ ಮಾಡಿಕೊಂಡು ಬಿಟ್ಟರೆ, ಅದು ಅಧಿಕೃತ ಹೇಗಾಗುತ್ತದೆ ? ಈಗ ಸಂಬಂಧ ಇಲ್ಲದಿರುವವನು ವಿಧಾನಸೌಧವನ್ನು ಯಾರಿಗೋ ಬರೆದುಕೊಟ್ಟುಬಿಟ್ಟು, ಇನ್ನೊಬ್ಬ ಅದನ್ನು ತೆಗೆದುಕೊಂಡು ಬಿಟ್ಟ ಎನ್ನಿ, ಅವನು ಬಂದುಬಿಟ್ಟು ನಮ್ಮನ್ನೆಲ್ಲಾ ಎವಿಕ್ಟ್ ಮಾಡಬಹುದೇ ? ಟೈಟಲ್ ವಿನಿದೆ ಎನ್ನ ತಕ್ಕಂಥಾದ್ದನ್ನು ನೋಡದೆ, ಅದೇನೂ ಇಲ್ಲದೇ, ಒಬ್ಬರಿಗೊಬ್ಬರು ಜಾಗ ಕೊಟ್ಟು, ಇಬ್ಬರೂ ಸೇರಿ ಮಾಡಿದರು, ಪಂಸೆ ಒಡೆದು ಬಿಟ್ಟರು ಎಂದರೆ ಇದು ಸರಿಯೇ ? ಅಲ್ಲಿ ಒಡೆದಿರುವುದು ೫೭ ಮನೆ ಅಲ್ಲ, ೧೫೦ಕ್ಕಿಂತ ಜಾಸ್ತಿ ಮನೆಗಳನ್ನು ಒಡೆದಿದ್ದಾರೆ. ಪುಟ್ಟಪುಟ್ಟದಾಗಿ ಕಟ್ಟಿಕೊಂಡಿರತಕ್ಕಂಥ ಮನೆಗಳನ್ನು ಸಂಪೂರ್ಣವಾಗಿ ಒಡೆದುಹಾಕಿ, ಲಕ್ಷಾಂತರ ರೂಪಾಯಿ ಲಂಚ್ಚಾನು ಮಾಡಿ, ಮನೆಯ ಒಳಗೆ ಇದ್ದಂಥ ಬಟ್ಟೆಬರೆ, ಪಾತ್ರೆಪರಟೆಯಿಂದ ಹಿಡಿದು, ಕಂಚಿ ಮೇಜು ಯಾವುದನ್ನೂ ಬಿಟ್ಟಿಲ್ಲ, ಎಲ್ಲವನ್ನೂ ಲಾರಿಯಮೇಲೆ ಹಾಕಿಸಿಕೊಂಡು ತೆಗೆದುಕೊಂಡು ಹೋಗಿದ್ದಾರೆ. ಕಾರ್ಪೊರೇಷನ್ ಸಿಬ್ಬಂದಿಗೆ ಹೆಂಡ ಕುಡಿಸಿ ಸಾಮಾನುಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಈ ಕೆಲಸ ಮಾಡುವುದಕ್ಕಾಗಿಯೇ ಸರಕಾರ ಕೊಳಚೆ ನಿರ್ಮೂಲನಾ ಮಂಡಲಿಯನ್ನು ಮಾಡಿರುವುದು ? ಇದನ್ನು ಈ ಫ್ಲೋರ್ ಮೇಲೆ ಡಿಫೆಂಡ್ ಮಾಡುವುದಕ್ಕೆ ಸರಕಾರಕ್ಕೆ ನಾಚಿಕೆಯಾಗಬೇಕು. ಬೇಕಾದರೆ ನೀವೂ ನನ್ನ ಜೊತೆಗೆ ಬನ್ನಿ ಅಥವಾ ಇಡೀ ಸದನ ಹೋಗಲಿ, ಅಲ್ಲಿ ಏನು ಕೆಲಸ ಮಾಡಿದ್ದಾರೆ. ಅದನ್ನು ನೋಡೋಣ. ಅಧ್ಯಕ್ಷರೇ ತಾವೂ ಬನ್ನಿ, ಮಾನ್ಯ ಮಂತ್ರಿಗಳು ಹೇಳಿರುವುದು ಸರಿ ಎಂದು ನೀವು ಹೇಳಿದರೆ ನಾನು ಈ ಜಾಗಕ್ಕೆ ರಾಜೀನಾಮೆ ಕೊಡುತ್ತೇನೆ, ಖಂಡಿತವಾಗಿ ಇರುವುದಿಲ್ಲ. ಈ ಅವ್ಯವಹಾರವನ್ನು ಡಿಫೆಂಡ್ ಮಾಡುವುವಕ್ಕೆ ಮಾನ್ಯ ಮಂತ್ರಿಗಳು ಹೋಗುತ್ತಿದ್ದಾರೆ. ಡಿಫೆಂಡ್ ಮಾಡುವುದಕ್ಕೊ ಒಂದು ಇತಿಮಿತಿ ಬೇಕು. ಇವತ್ತು ಜನರನ್ನು ಎಳೆದು ಬಿಸಾಕಿಬಿಟ್ಟು, ಕಾರ್ಪೊರೇಷನ್ ಸಿಬ್ಬಂದಿಗೆ ಹೆಂಡಕುಡಿಸಿ, ಮನೆಗಳನ್ನು ಒಡೆಸಿಹಾಕಿಸಿದಿರಿ ಎಂಬ ಗಂಭೀರವಾದ ವಿಷಯವನ್ನು ಹೇಳಿದರೆ. ಅದನ್ನು ಡಿಫೆಂಡ್ ಮಾಡುತ್ತಿದ್ದೀರಾ ? ಈ ಕೊಳಚೆ ನಿರ್ಮೂಲನಾ ಮಂಡಲಿ ಇರುವುದು, ಕೊಳಚೆಯನ್ನು ನಿರ್ಮೂಲನೆ ಮಾಡುವುದಕ್ಕೋ ಅಥವಾ ಅಲ್ಲಿರುವ ಜನರನ್ನು ನಿರ್ಮೂಲನೆ ಮಾಡುವುದಕ್ಕೋ ? ತುಂಬಾ ಅಮಾನುಷವಾದ ಕೆಲಸವನ್ನು ಇವತ್ತು ಮಾಡಿದ್ದಾರೆ. ಅಲ್ಲಿನ ಜನಗಳ ಹತ್ತಿರ ಎಲ್ಲಾ ದಾಖಲೆಗಳೂ ಇವೆ. ಎಲ್ಲರೂ ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ. ಕಟ್ಟಿಕೊಂಡಿರತಕ್ಕಂಥ ಸೈಟುಗಳೆಲ್ಲಾ ರಿಜಿಸ್ಟರ್ ಆಗಿವೆ. ಆ ಸೈಟ್‌ಗಳ ಮೇಲೆ ಅಧಿಕೃತವಾಗಿ ಪಂಚಾಯತಿ ಪರ್ಮಿಷನ್ ತೆಗೆದುಕೊಂಡು ಮನೆ ಕಟ್ಟಿದ್ದಾರೆ. ೧೯೫೪ನೇ ಇಸವಿಯಿಂದ ನಡೆದಿರುವಂತಹ ವ್ಯವಹಾರದಲ್ಲಿ. ಇವತ್ತು ಹುಟ್ಟಿಕೊಂಡಿರತಕ್ಕಂಥ ಕೊಳಚೆ ಮಂಡಲಿ ಮತ್ತು ಅಭಿವೃದ್ಧಿ ಪ್ರಾಧಿಕಾರದವರಿಗೆ ಏನು ಹಕ್ಕು ಇದೆ. ಇಬ್ಬರೂ ಏನು ವ್ಯವಹಾರ ಮಾಡಿಕೊಂಡಿದ್ದಾರೆ. ಅಲ್ಲಿರತಕ್ಕದ್ದು ೨೪೦ ಮನೆ, ಅವನ್ನು ಕಟ್ಟಿ ನಾಲ್ಕು ವರ್ಷ ಆಯಿತು. ಮಾನ್ಯ ಅಧ್ಯಕ್ಷರೇ ಅಲ್ಲಿ ಕೊಳಚೇ ನಿರ್ಮೂಲನಾ ಮಂಡಲಿಯವರು ಸುಮಾರು ೨೪೦ ಮನೆಗಳನ್ನು ಕಟ್ಟಿ ೪ ವರ್ಷಗಳಾಯಿತು. ಆ ಮನೆಗಳಿಗೆ ಇದುವರೆವಿಗೂ ಒಬ್ಬರೂ ಸಹ ಹೋಗಿಲ್ಲ. ೪ ೨೪೦ ಮನೆಗಳಲ್ಲಿ ಹೋಗಿ ವಾಸ ಮಾಡುವಂತಹ ಸ್ಥಿತಿಯಲ್ಲಿ ಕೊಳಚೇ ನಿರ್ಮೂಲನಾ ಮಂಡಲಿಯವರು ಕಟ್ಟಿಲ್ಲ. ಇವರು ಯಾವುದೋ ರೀತಿಯಲ್ಲಿ ಮನೆ ಕಟ್ಟಬೇಕು ಸಂಬಂಧಪಟ್ಟ ಕಂಟ್ರಾಕ್ಟ್‌ದಾರರಿಗೆ ಹಣ ಕೊಡಬೇಕು ಅದಕ್ಕಾಗಿ ಆ ಮನೆಗಳನ್ನು ಕಟ್ಟಿಸಿದ್ದಾರೆ. ಇವರು ಸಾಮಾನ್ಯ ಬಡ ಜನ ವಾಸ ಮಾಡುವಂತಹ ಮನೆಗಳು ಕಟ್ಟಿಸಿಲ್ಲ. ಆ ಎಲ್ಲಾ ಮನೆಗಳು ಖಾಲಿ ಇವೆ. ಸರ್ವೆ ನಂಬರು ೧೧ ಮತ್ತು ೧೨ ನ್ನು ಸರ್ವೆ ಮಾಡಿ ಅಲ್ಲಿ ಇವರು ಮನೆಗಳನ್ನು ಕಟ್ಟಿದ್ದಾರೆ. ಇದು ಲಗ್ಗೇರಿಯಲ್ಲಿ ಬರುತ್ತದೆ, ಜಾರಕಾ ಬಂಡೆ ಸರ್ವೆ ನಂಬರು ಒಂದು. ಈ ಜಾರುಕಾ ಬಂಡೆ ಭೂಮಿ ಸ್ವಲ್ಪ ಸಮತಟ್ಟಾಗಿದೆ. ಈ ಜಮೀನಿನಲ್ಲಿ ಸುಮಾರು ೨೫ ವರ್ಷಗಳ ಹಿಂದೆ ವ್ಯವಸಾಯ ಮಾಡುತ್ತಿದ್ದರು. ಈಗ ಇಲ್ಲ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಇವತ್ತು ಬೆಂಗಳೂರು ನಗರದ ಸುತ್ತಮುತ್ತ ವ್ಯವಸಾಯದ ಜಮೀನು ಏನಾಗಿದೆ ಎನ್ನುವುದು ತಮಗೆ ಗೊತ್ತಿದೆ. ಈ ಜಾರುಕಾ ಬಂಡೆ ಜಮೀನು ಸ್ವಲ್ಪ ಸಮತಟ್ಟವಾಗಿರುವುದರಿಂದ ಅಲ್ಲಿ ಕೊಳಚೇ ಪ್ರದೇಶದ ಮಂಡಲಿಯವರು ಹೋಗಿ ಅಲ್ಲಿದ್ದಂತಹ ಮನೆಗಳನ್ನು ಕೆಡವಿ ಆ ಜಮೀನನ್ನು ನಮ್ಮದು, ನಮಗೆ ಸೇರಿದ್ದು ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆ ಬಗ್ಗೆ ತಾವು ಏನಾದರೂ ವಿವರಣೆಯನ್ನು ಕೇಳಿ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ೧೧–೧೨ನೇ ಸರ್ವೆ ನಂಬರುಗಳನ್ನು ಸರ್ವೆ ಮಾಡಿಲ್ಲ. ಈ ಜಾರುಕಾ ಬಂಡೆ ಜಮೀನು ಸರ್ವೆ ನಂಬರು ಒಂದಕ್ಕೆ ಸೇರಿದ್ದು. ೧೧–೧೨ಕ್ಕೆ ಸೇರಿಲ್ಲವೆಂದು ಹೇಳುತ್ತೀನೆ. ಈ ಸರ್ವೆ ನಂಬರು ಒಂದರಲ್ಲಿ ಅಂದರೆ ಜಾರುಕಾ ಬಂಡೆಯಲ್ಲಿ ಸ ಮಾರು ೧೫೦ಕ್ಕೂ ಮೇಲ್ಪಟ್ಟು ಮನೆಗಳನ್ನು ಸರ್ಕಾರದವರು ಯಾವುದೇ ನೋಟಿಸ್ ಕೊಡದೆ, ನೋಟಿಸ್ ಜಾರಿ ಮಾಡಿದೆ, ೨೪ ಗಂಟೆಗಳಲ್ಲಿ ಯಾರೂ ಮನೆಗಳಲ್ಲಿ ಇಲ್ಲದ ಸಮಯವನ್ನು ನೋಡಿಕೊಂಡು ಕೊಳಚೇ ಮಂಡಲಿಯವರು ಮತ್ತು ಕಾರ್ಪೊರೇಷನ್‌ನವರು ಆ ಮನೆಗಳನ್ನು ಕೆಡವಿ ಹಾಕಿದ್ದಾರೆ. ಈ ಮನೆಗಳಲ್ಲಿ ಕೆಲವು ಜನರಿಗೆ ಮೊದಲೇ ನೋಟಿಸ್ ಸರ್ವ್ ಮಾಡಿದ್ದರು. ಅವರು ಕೋರ್ಟಿಗೆ ಹೋಗಿ ಇಂಜೆಂಕ್ಷನ್ ಆರ್ಡರ್ ತೆಗೆದುಕೊಂಡು ಬಂದಿದ್ದರೂ ಸಹ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಆ ಮನೆಗಳನ್ನು ಸಹ ಕೆಡವಿ ಹಾಕಿದ್ದಾರೆ. ಆದ್ದರಿಂದ ದಯವಿಮಾಡಿ ಮಾನ್ಯ ಮಂತ್ರಿಗಳನ್ನು ಈ ವಿಷಯವನ್ನು ಈ ರೀತಿ ಡಿಫೆಂಡ್ ಮಾಡಿಕೊಳ್ಳುವುದು ಸರಿಯಲ್ಲ. ಅಲ್ಲಿಗೆ ತಾವೇ ಸ್ವತಃ ಹೋಗಿ ಪರಿಶೀಲನೆ ಮಾಡಿ. ಸರ್ವೆ ನಂಬರು ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ನೋಡಿ. ಸುಮ್ಮನೆ ಅಧಿಕಾರಿಗಳು ಹೇಳಿದ್ದನ್ನು ತಾವು ಈ ಸದನದಲ್ಲಿ ಹೇಳಿ ಡಿಫೆಂಡ್ ಮಾಡಿಕೊಳ್ಳುವುದು ಸರಿಯಲ್ಲ.

ಅಧ್ಯಕ್ಷರು.—ಪರಿಸ್ಥಿತಿ ನೋಡಿ ತಾವೇ ಸ್ವತಃ ಪರಿಶೀಲನೆ ಮಾಡಿ ಬನ್ನಿ ಎಂದು ಮಾನ್ಯ ಸದಸ್ಯರು ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಟ್ಟ ಮೇಲೆ ಬೇಕಾದರೆ ತಾವು ಕ್ಲಾರಿಫಿಕೇಶನ್ಸ್ ಕೇಳಿ.

ಶ್ರೀ ಎಂ.ಎಸ್. ಕೃಷ್ಣನ್.–ನಾವೇನು ಕೇಳಿದರೂ ಸಹ ಮಾನ್ಯ ಮಂತ್ರಿಗಳಿಂದ ಇದಕ್ಕಿಂತ ಹೆಚ್ಚಿನ ಉತ್ತರವನ್ನು ನಾವ್ಯಾರು ನಿರೀಕ್ಷೆ ಮಾಡಿಲ್ಲ. ಇತ್ತೀಚಿಗೆ ಮಾನ್ಯ ಮಂತ್ರಿಗಳು ಯಾವ ರೀತಿಯಲ್ಲಿ ಉತ್ತರಗಳನ್ನು ಕೊಡುತ್ತಾರೆನ್ನುವುದು ಸಹ ನನಗೆ ಗೊತ್ತಿದೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದಂಥ ಶ್ರೀಮಾನ್ ಕೆ ಹೆಚ್. ಶ್ರೀನಿವಾಸ್‌ರವರು ಹೇಳಿದ್ದು ಅಕ್ಷರ ಸಹಃ ನಿಜ. ಆ ಸ್ಥಳಕ್ಕೆ ನಾನೂ ಸಹ ಹೋಗಿದ್ದೆ. ಪ್ರತಿಯೊಂದು ಮನೆಯ ಮೇಲೂ ಅಮಾನುಷವಾಗಿ ವರ್ತನೆ ಮಾಡಿದ್ದಾರೆ. ಕೊಳಚೆ ಮಂಡಲಿಯವರು ಇರುವುದು ಕೊಳಚೇ ಮಂಡಲಿಗಳಲ್ಲಿ ವಾಸ ಮಾಡುವಂತಹ ಜನರಿಗೆ ಒಳ್ಳೆಯ ಸೌಲಭ್ಯಗಳನ್ನು ಕಲ್ಪಿಸಿಕೊಡಲು ; ಆದರೆ ಇಲ್ಲಿ ಕೊಳಚೇ ಮಂಡಲಿಯವರೇ ಹೋಗಿ ಆ ಮನೆಗಳನ್ನು ಒಡೆದು ಹಾಕಿ ಅಮಾನುಷವಾಗಿ ನಡೆದುಕೊಂಡಿದ್ದಾರೆ. ಆ ಜಾಗದಲ್ಲಿದ್ದಂತಹ ಮನೆಗಳನ್ನು ಕೆಡವಿ ಹಾಕಿ ಆ ಜನರನ್ನು ಬೀದಿಪಾಲು ಮಾಡಿದ್ದಾರೆ. ಹೆಣ್ಣು ಮಕ್ಕಳನ್ನು ಲೆಕ್ಕಿಸದೆ ಅವರ ಬಗ್ಗೆ ಹೀನಾಮಾನವಾಗಿ ವರ್ತನೆ ಮಾಡಿದ್ದಾರೆ. ಅವರ ಮನೆಗಳಲ್ಲಿ ಇದ್ದಂತಹ ಸಾಮಾನುಗಳನ್ನು ಸಹ ಲಾರಿಯಲ್ಲಿ ತೆಗೆದುಕೊಂಡು ಹೋಗಿದ್ದಾರೆ ಆ ಸಾಮಾನುಗಳನ್ನು ಅವರಿಗೆ ಕೊಟ್ಟು ಬಿಡಿ ಎಂದು ನಾನು ಸಹ ಒಂದು ಪತ್ರವನ್ನು ಬರೆದು ಕೊಟ್ಟೆ. ಆಗ ಅವರು ನನಗೆ ಹೇಳಿದರು, ಅವರ ಸಾಮಾನುಗಳು ಕಾರ್ಪೊರೇಷನವರ ಬಳಿ ಇವೆ, ನಮ್ಮ ಬಳಿ ಇಲ್ಲವೆಂದು ಹೇಳಿದರು. ಕೊಳಚೇ ಮಂಡಲಿಗಳ ಸಂಘಗಳ ಅಧ್ಯಕ್ಷರು ನಾನು ಆ ದಿವಸ ಮೆರವಣಿಗೆಯಲ್ಲಿ ಹೋದೆವು ಕೊಳಚೇ ಮಂಡಲಿ ಆಧ್ಯಕ್ಷರನ್ನು ವಿಚಾರಿಸಿದೆವು. ನಿಮಗೆ ಸೇರಿದ ಸರ್ವೆ ನಂಬರು ೧೧–೧೨. ಈ ಜಾರುಕಾ ಬಂಡೆಯ ಸರ್ವೆ ನಂಬರು ಒಂದು. ಇದು ನಿಮಗೆ ಬರುವುದಿಲ್ಲವೆಂದು ಹೇಳಿದರೆ ಆ ಕೊಳಚೇ ನಿವರ್ಂಲನಾ ಮಂಡಲಿಯ ಅಧ್ಯಕ್ಷರು ಹೇಳಿದರು, ಇಲ್ಲಾ ಅದು ನಮಗೆ ಸೇರುತ್ತದೆಂದು ನಮ್ಮ ಜೊತೆಯಲ್ಲಿ ವಾದ ಮಾಡಿದರು. ನಾನು ಆಗ ಅವರ ಜೊತೆಯಲ್ಲಿ ವಾದ ಮಾಡುವುದಕ್ಕೆ ಹೋಗಲಿಲ್ಲ. ಬಡವರ ಮನೆಗಳನ್ನು ತಾವು ಕೆಡವಿ ಹಾಕುತ್ತೀರಿ. ಆದರೆ ಶ್ರೀಮಂತರ ಮನೆಗಳನ್ನು ಕೆಡವಿ ಹಾಕುವುದಕ್ಕೆ ತಾವು ಹೋಗುವುದಿಲ್ಲ. ಇವತ್ತು ಕಾರ್ಪೊರೇಶನ್‌ನವರು ಸದಾಶಿವನಗರದಲ್ಲಿ ಇರುವಂತಹ ಒಂದು ಮನೆಯ ಮೇಲೆ ಕೋರ್ಟ್‌ನಲ್ಲಿ ಕೇಸ್ ಹಾಕಿದ್ದರು. ಆ ಕೇಸು ಸರ್ಕಾರದ ಪರವಾಗಿ ಆಗಿದೆ. ಸುಮಾರು ೧೧ ಅಂತಸ್ತುಗಳ ಆ ಮನೆಯನ್ನು ಸರಿಯಾದ ಪ್ಲಾನ್ ಪ್ರಕಾರ ಕಟ್ಟಿಲ್ಲವೆಂದು ಹೇಳಿದ್ದಾರೆ. ಹಾಗಿದ್ದರೂ ಸಹ ಆ ಮನೆಯನ್ನು ಸರ್ಕಾರದವರೇ ಉಳಿಸಿಕೊಳ್ಳುವುದಕ್ಕೆ ಯೋಚನೆ ಮಾಡುತ್ತಿದ್ದಾರೆಂದು ನನಗೆ ತಿಳಿದು ಬಂದಿದೆ. ಕಾರಣ ಅವರು ಶ್ರೀಮಂತರು ; ಆದ್ದರಿಂದ ಅವರಿಗೆ ಮಾನವೀಯತೆ ದೃಷ್ಟಿಯನ್ನು ತೋರಿಸಬೇಕಂತೆ. ಈ ಮಾನವೀಯತೆ ದೃಷ್ಟಿಯಿಂದ ಆ ಮನೆಯನ್ನು

ಸರ್ಕಾರ ಕೊಂಡುಕೊಳ್ಳಲಂ ಹೊರಟಿದ್ದಾರೆ. ಅದೇ ಬಡವರು ಆದರೆ, ಬೀದಿ ಪಾಲು ಮಾಡುತ್ತಾರೆ. ಆ ಮನೆಗಳನ್ನು ಕೆಡವಿ ಹಾಕುವುದಕ್ಕೆ ಆ ಜನರಿಗೆ ಮೊದಲೇ ನೋಟಿಸ್ ಕೊಟ್ಟಿಲ್ಲ. ಮನೆಗಳನ್ನು ಕಟ್ಟಿಕೊಂಡಿರುವವರು ಕಾನೂನು ಪ್ರಕಾರ ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ. ಆ ಮನೆಗಳಿಗೆ ಲೈಟ್ ಹಾಕಿಸಿಕೊಂಡಿದ್ದಾರೆ.

೩-೩೦ ಪಿ.ಎಂ.

ಆದರೂ ಆ ಮನೆಗಳನ್ನು ಉರುಳಿಸಿ ಆ ಮನೆಗಳಲ್ಲಿ ಇದ್ದಂಥ ಸಾಮಾನುಗಳನ್ನು ಅವರು ತೆಗೆದುಕೊಂಡು ಹೋಗಿದ್ದಾರೆ. ಆ ಸಾಮಾನುಗಳನ್ನು ಪುನಃ ಅವರುಗಳಿಗೆ ವಾಪಸ್ ಕೊಡಬೇಕು ಹಾಗೂ ನಷ್ಟ ವಾಗಿರುವವರಿಗೆ ಸರ್ಕಾರದವರು ಪರಿಹಾರವನ್ನು ಕೊಡಬೇಕು. ಮನೆಗಳನ್ನು ಕಳೆದುಕೊಂಡಿರುವವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ನಿವೇಶನವನ್ನು ಕೊಡಬೇಕು. ಹೀಗೆ ಮಾಡದಿದ್ದರೆ ಅವರುಗಳಿಗೆ ಸರ್ಕಾರ ಅನ್ಯಾಯ ಮಾಡಿದಂತಾಗುತ್ತದೆ. ಈಗ ಇವರು ಮಾಡಿರುವುದು ಪರಮ ಅನ್ಯಾಯ.

ಶ್ರೀ ಎ. ಲಕ್ಷ್ಮೀಸಾಗರ್. - ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಬಹಳ ಆವೇಶದಿಂದ ಮಾತನಾಡಿದ್ದಾರೆ. ನನ್ನ ಹೇಳಿಕೆಯನ್ನು ಇಲ್ಲಿ ಹೇಳಿದ್ದೇನೆ ಆ ಪ್ರದೇಶದಲ್ಲಿರತಕ್ಕಂಥ ಖಾಲಿ ಜಾಗದಲ್ಲಿ ಸುಮಾರು ನಾಲ್ಕೈದು ಸಾವಿರ ಜನ ಬಹಳ ಸಣ್ಣ ಪುಟ್ಟ ಪ್ರದೇಶಗಳಲ್ಲಿ ವಾಸಮಾಡುತ್ತಿರತಕ್ಕಂಥ ಬಹಳ ಬಡವರಿಗೆ ಅಲ್ಲಿ ಮನೆಗಳನ್ನು ಕಟ್ಟಿಸಿಕೊಡಬೇಕೆನ್ನುವ ಉದ್ದೇಶದಿಂದ ಆ ಜಾಗವನ್ನು ಖಾಲಿ ಮಾಡಿದ್ದೇವೆ. ಹುಡ್ಕೋ ನೆರವಿನಿಂದ ಮನೆಗಳನ್ನು ಆ ಜಾಗದಲ್ಲಿ ಕಟ್ಟಬೇಕೆಂದು ಸಾಲವನ್ನು ಸಹ ಕೊಟ್ಟಿದ್ದಾರೆ. ಈ ಕೆಲಸ ಬಡವರಿಗೋಸ್ಕರ ಮಾಡುತ್ತಿರುವುದು. ಸಾಹುಕಾರರಿಗೋಸ್ಕರವಲ್ಲ. ವಿಂಲ್ ಮಾಲೀಕರಿಗೋಸ್ಕರ ವಲ್ಲ. ಕೊಳಚೆ ಪ್ರದೇಶದಲ್ಲಿ ವಾಸಮಾಡುತ್ತಿರತಕ್ಕಂಥ ಸುಮಾರು ಐದು ಸಾವಿರ ಜನವರಿಗೆ ಮನೆ ಗಳನ್ನು ಕಟ್ಟಿಸಿಕೊಡುತ್ತೇವೆ ಬಹು ಅಂತಸ್ತಿನ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆನ್ನುವ ಕಾರಣದಿಂದ ಈ ಜಾಗವನ್ನು ಖಾಲಿ ಮಾಡಿಸಲಾಗಿದೆ. ಈ ಬಹು ಅಂತಸ್ತಿನ ಕಟ್ಟಡಗಳನ್ನು ಕಟ್ಟುವುದಕ್ಕಾಗಿ ಸುಮಾರು ಎರಡು ಕೋಟಿ ರೂಪಾಯಿಗಳ ಎಸ್ಟಿಮೇಟನ್ನು ಮಾಡಲಾಗಿದೆ. ಈ ಜಾಗ ನಿಮಗೆ ಹೇಗೆ ಬಂತು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಗೌರಿಶಿನೇ ಇಸವಿಯಲ್ಲಿ ಬಿ.ಡಿ ಎ.ನವರು ಈ ಜಾಗವನ್ನು ತಗೆದುಕೊಂಡಂ ಕೊಳಚೆ ನಿರ್ಮೂಲನಾ ಮಂಡಳಿಗೆ ಕೊಟ್ಟಿದೆ. ಈ ಜಾಗವನ್ನು ಎರಡು ಸಾರಿ ಸರ್ವೆ ಸೆಟ್ಲ್‌ಮೆಂಟ್‌ನವರಿಂದ ಸೆಟ್ಲ್‌ಮೆಂಟ್ ಮಾಡಿಸಿದ್ದೇವೆ. ಈ ಸರ್ವೇ ಸೆಟ್ಲ್‌ಮೆಂಟ್‌ನ್ನು ಸಾರ್ವಜನಿಕರ ಎದುರಿಗೇ ಮಾಡಿದ್ದಾರೆ. ಈ ಜಮೀನಿನ ಕೇಸ್ ಕೋರ್ಟ್‌ನಲ್ಲಿ ಇದೆ ಎಂದು ಹೇಳಿದ್ದಾರೆ. ಈ ಜಮೀನಿಗೂ ಕೋರ್ಟಿಗೂ ಏನೂ ಸಂಬಂಧ ಇಲ್ಲ. ನಾನು ಇದನ್ನೆಲ್ಲಾ ವೆರಿಫೈ ಮಾಡಿದ್ದೇನೆ.ಕೋರ್ಟ್‌ನಲ್ಲಿ ಇರುವುದು ಬೇರೆ ಸರ್ವೆ ನಂಬರಿನ ಜಾಗ. ಈ ಜಾಗಕ್ಕೆ ಯಾವುದೇ ರೀತಿಯಲ್ಲಿ ಕೋರ್ಟ್‌ನಲ್ಲಿ ಕೇಸ್ ಇಲ್ಲ. ನಾನು ಎಲ್ಲವನ್ನೂ ವೆರಿಫೈ ಮಾಡಿದ್ದೇವೆ. ನೀವು ಹೇಳಿದ್ದನ್ನು ನಾನು ಕೇಳಿಕೊಂಡು ಹೋದರೆ ಕಾನೂನು ಪ್ರಕಾರ ಏನೂ ಮಾಡುವುದಕ್ಕೂ ಆಗುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ನೀವು ಇರುವುದೇ ಮನೆಗಳನ್ನು ಒಡೆಯುವುದಕ್ಕೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಇರುವುದು, ಮನೆಗಳನ್ನು ಅನಧಿಕೃತವಾಗಿ ಕಟ್ಟಿಸುವುದಕ್ಕೆ.

(ಗೊಂದಲ)

ಶ್ರೀ ಎಂ.ಎಸ್. ಕೃಷ್ಣನ್.—ಮಂತ್ರಿಗಳು ಬಾಯಿ ಹಿಡಿದು ಮಾತನಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಸಹ ಬಾಯಿಹಿಡಿದು ಮಾತನಾಡಬೇಕು.

ಶ್ರೀ ಎಂ.ಎಸ್. ಕೃಷ್ಣನ್.—ಮಂತ್ರಿಗಳಾದವರು ಸ್ವಲ್ಪ ಬಾಯಿ ಹಿಡಿದು ಮಾತನಾಡಬೇಕು.

(ಗೊಂದಲ)

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ.

ಶ್ರೀ ಎಂ.ಎಸ್. ಕೃಷ್ಣನ್.—ನಾನು ಕುಳಿತುಕೊಳ್ಳುವುದಕ್ಕಲ್ಲಾ ಬಂದಿರುವುದು, ನಾವೇನು ಅನಧಿಕೃತವಾಗಿ ಮನೆಗಳನ್ನು ಕಟ್ಟಿಸುವುದಕ್ಕೆ ಪ್ರೋತ್ಸಾಹ ಕೊಡುತ್ತಿಲ್ಲ.

ಅಧ್ಯಕ್ಷರು.—ಅವರು ಏನು ಹೇಳುತ್ತಾರೋ ಕೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಈ ಮನೆಗಳನ್ನು ಉರುಳಿಸುವುದಕ್ಕೆ ನಾವು ಮೊದಲೇ ನೋಟೀಸನ್ನು ಕೊಟ್ಟಿದ್ದೆವು. ೩೬ ಜನರಿಗೆ ಪರ್ಸನಲ್ ಆಗಿ ನೋಟೀಸ್‌ನ್ನು ಸರ್ವ್ ಮಾಡಿದ್ದೇವೆ. ೩೬ ಜನರಲ್ಲಿ ೧೨ ಜನಕ್ಕೆ ಇನ್ ಪರ್‌ಸನ್ ಆಗಿ ನೋಟೀಸ್ ಸರ್ವ್ ಮಾಡಿದ್ದೇವೆ. ೨೭ ಜನಕ್ಕೆ ಸಬ್‌ಸ್ಟಿಟ್ಯೂಟ್ ವೇನಲ್ಲಿ ನೋಟೀಸ್ ಸರ್ವ್ ಮಾಡಿದ್ದೇವೆ. ಕೆಲವರು ನೋಟೀಸನ್ನು ರೆಫ್ಯೂಸ್ ಮಾಡಿದ್ದಾರೆ. ಇನ್ನು ೨೧ ಜನರು ಎಲ್ಲಿ ಇದ್ದಾರೆಂದು ಗೊತ್ತಿಲ್ಲ. ಸ್ಲಮ್ ಬೋರ್ಡ್ ಕ್ಲಿಯರೆನ್ಸ್ ಆ್ಯಕ್ಟ್ ೫೫ (೩) ಪ್ರಕಾರ ನೋಟೀಸ್‌ಗಳನ್ನು ಎಲ್ಲರಿಗೂ ಜಾರಿ ಮಾಡಿದ್ದೇವೆ. ಆಲ್ಲಿ ೫೭ ಮನೆಗಳನ್ನು ಮಾತ್ರ ಉರುಳಿಸಲಾಗಿದೆ. ಸನ್ಮಾನ್ಯ ಶ್ರೀನಿವಾಸ್‌ರವರು ನಾನು ಎರಡು ಗಂಟೆಗಳ ಕಾಲ ನೋಡಿ ಕೊಂಡು ಬಂದಿದ್ದೇನೆ ಎಂದು ಹೇಳಿದ್ದಾರೆ. ನಾನೂ ಸಹ ಅಲ್ಲಿಗೆ ಹೋಗಿದ್ದೆ. ೫೭ ಮನೆಗಳಿಗಿಂತ ಜಾಸ್ತಿ ಉರುಳಿಸಿಲ್ಲವೆಂದು ನಾನು ಹೇಳಂತ್ತೇನೆ.

ಶ್ರೀ ಕೆ.ಪಿಚ್. ಶ್ರೀನಿವಾಸ್.—ನಿಮ್ಮ ಲೆಕ್ಕ ಯಾವುದು ? ೫೭ ಮನೆಗಳಿಗಿಂತ ಜಾಸ್ತಿ ಉರುಳಿಸಿದ್ದರೆ ಅವರು ರಾಜೀನಾಮೆಯನ್ನು ಕೊಡಬೇಕು. ಇಲ್ಲದಿದ್ದರೆ ನಾನು ರಾಜೀನಾಮೆಯನ್ನು ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು.....

ತಾವುಗಳು ಮಾನ್ಯ ಮಂತ್ರಿಯವರಿಗೆ ಉತ್ತರವನ್ನು ಹೇಳುವುದಕ್ಕೆ ಬಿಡುತ್ತೀರೋ ಇಲ್ಲವೋ ?

(ಗೊಂದಲ)

ಅವರಿಗೆ ಉತ್ತರವನ್ನು ಹೇಳಿ ಮುಗಿಸುವುದಕ್ಕೆ ಅವಕಾಶ ಮಾಡಿ ಕೊಡಿ.....

ಶ್ರೀ ಕೆ. ಎಚ್. ಶ್ರೀನಿವಾಸ್.—ತಪ್ಪು ಇದ್ದರೆ, ಅದನ್ನು ಸರಿಪಡಿಸುವಂತಹ ಜವಾಬ್ದಾರಿ ಸರಕಾರದವರದ್ದು.....

ಅಧ್ಯಕ್ಷರು.—ನಾನು ಮಾನ್ಯ ಮಂತ್ರಿಗಳವರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇನೆ. ಅವರು ತಮ್ಮ ಮಾತನ್ನು ಮುಗಿಸಲಿ.....

(ಗೊಂದಲ)

ಶ್ರೀ ಎ ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರುಗಳು ಹೀಗೆ ಜಗಳಕ್ಕೆ ಬಂದರೆ ನನಗೆ ಉತ್ತರ ಕೊಡುವುದಕ್ಕಾಗುವುದಿಲ್ಲ...ನನಗೆ ಬಂದ ಪರದಿಯ ಪ್ರಕಾರ...

(ಗೊಂದಲ)

ಅಧ್ಯಕ್ಷರು.—ತಾವುಗಳು ಈ ತರಹ ಗೊಂದಲ ಮಾಡಿದರೆ ನಾನು ಮುಂದಿನ ವಿಷಯಕ್ಕೆ ಹೋಗ ಬೇಕಾಗುತ್ತದೆ.....

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಯವರು ಹೋಗಿದ್ದಾರೆ ಎಂದು ಹೇಳುತ್ತಾರೆ ? ಅವರು ಅಲ್ಲಿಗೆ ಹೋಗಿ ಕಾರಿನಿಂದ ಇಳಿದು ಹೋಗಿ ಅಲ್ಲಿ ಜನರ ಕಡೆ ಮಾತನಾಡಲಿಲ್ಲ. ಅದ ನಮಗೆ ಗೊತ್ತು.....

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ನಾನು ನೋಡಿಕೊಂಡು ಬಂದಿದ್ದೇನೆ. ನೋಟೀಸನ್ನು ಕೊಟ್ಟಿ ದ್ದಾರೆ. ಅಲ್ಲಿ ಅನಧಿಕೃತವಾಗಿ ಕುಳಿತ್ತಿದ್ದಾರೆ. ಕೋರ್ಟಿನಿಂದ ಯಾವ ತಡೆಯಾಜ್ಞೆಯೂ ಇಲ್ಲ– ಎಂದು ನನಗೆ ಬಂದಿರತಕ್ಕಂಥ ವರದಿಯಿಂದ ತಿಳಿದಿದೆ. ಮತ್ತು ಸಾಮಾನುಗಳನ್ನು ಅಲ್ಲಿಂದ ಯಾರೂ ತೆಗೆದುಕೊಂಡು ಹೋಗಿಲ್ಲ. ಮಂಡಳಿಯವರೂ ಕೂಡ ತೆಗೆದುಕೊಂಡು ಹೋಗಿಲ್ಲ. ಆದುದರಿಂದ

ಅವರಿಗೆ ಪರಿಹಾರ ಕೊಡತಕ್ಕಂಥ ಪ್ರಶ್ನೆಯೇ ಬರುವುದಿಲ್ಲ.....ನಿರ್ವಸತಿಕರಿಗೆ ಸಾವಿರಾರು ಮನೆಗಳನ್ನು ಕಟ್ಟಿ ಕೊಡತಕ್ಕಂಥದ್ದಾಗಬೇಕು.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್. —ನಾನು ಮಾನ್ಯ ಲಕ್ಷ್ಮೀಸಾಗರ್‌ರವರು ಸತ್ಯ ಹೇಳುತ್ತಾರೆಂದು ತಿಳಿದುಕೊಂಡಿದ್ದೆ. ಮುಂಡಿಗೆಯವರು ತೆಗೆದುಕೊಂಡು ಹೋದ ಸಾಮಾನುಗಳನ್ನು ವಾಪಸ್ಸು ಕೊಟ್ಟಿಲ್ಲ.....

(ಗೊಂದಲ)

ಅಧ್ಯಕ್ಷರು. —ದಯವಿಟ್ಟು ತಾವು ಕುಳಿತುಕೊಳ್ಳಿ.....

ಶ್ರೀ ಎಂ.ಎಸ್.ಕೃಷ್ಣನ್. —ಹೇಗೆ ಇವರನ್ನು ನಂಬುವುದು?ಯಾರೋ ಹೇಳಿದ್ದನ್ನು ಹೇಳುತ್ತಾರೆ.

ಅಧ್ಯಕ್ಷರು. —ನಿಮಗೆ ಮಂತ್ರಿಗಳ ಉತ್ತರ ಬೇಕಾಗಿಲ್ಲವೆ ? ಬೇಕಿದ್ದಲ್ಲಿ ಅವರು ಉತ್ತರ ಕೊಡುವ ತನಕ ತಾವುಗಳು ದಯವಾಡಿ ಕುಳಿತುಕೊಳ್ಳಬೇಕು.....

ಶ್ರೀ ಬಿ. ಎಸ್. ಯಡಿಯೂರಪ್ಪ. —ಬಡವರ ಮನೆಗಳೂ ಹೋದವು, ಇದ್ದ ಸಾಮಾನುಗಳೂ ಹೋದವು.....

ಶ್ರೀ ಎ. ಲಕ್ಷ್ಮೀಸಾಗರ್. —ನನಗೆ ನನ್ನ ಕಾರ್ಯಕ್ರಮ ಇದೆ. ಯಾರಿಗೆ ಮನೆಗಳು ಇಲ್ಲ, ಆ ಕಾರ್ಯಕ್ರಮದ ಪ್ರಕಾರ ಸೂಕ್ತ ರೀತಿಯಲ್ಲಿ ಆರ್ಜಿಯನ್ನು ಸಲ್ಲಿಸಲಿ. ಅಂತಹವರಿಗೆ ಮನೆಗಳನ್ನು ಕೊಡತಕ್ಕಂತಹ ಕಾರ್ಯಕ್ರಮ ಇದೆ. ಅದರಲ್ಲಿ ಸಿಗುತ್ತದೆ.

ಶ್ರೀ ಕೆ. ಎಚ್. ಶ್ರೀನಿವಾಸ್. —ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಯಾವುದೇ ವಿಚಾರದಲ್ಲಿ ನಾನು ಸತ್ಯಾಂಶ ಇಲ್ಲದೇ ಆಗ್ರಹ ಮಾಡುವುದಿಲ್ಲ. ನಾನೂ ಅಲ್ಲಿ ಹೋಗಿ ನೋಡಿಕೊಂಡು ಬಂದಿದ್ದೇನೆ. ಮಾನ್ಯ ಮಂತ್ರಿಗಳು ನನಗೆ ವರದಿ ಬಂದಿದೆ ಎಂದು ಹೇಳಬಹುದಾಗಿದೆ. ನಾನು ನೋಡಿಕೊಂಡು ಸತ್ಯಾಂಶಗಳನ್ನು ತಿಳಿದಿರುವುದರಿಂದ ಇಲ್ಲಿ ಕೇಳಬೇಕಾಗಿರುತ್ತದೆ. ಅದಕ್ಕೆ ಸರಕಾರ ಈ ಸಭೆಯಲ್ಲಿ ಸರಿಯಾದ ಉತ್ತರವನ್ನು ಹೇಳಬೇಕಾಗಿರುತ್ತದೆ. ಪ್ರಾಮಾಣಿಕವಾದ ಉತ್ತರವನ್ನು ಹೇಳಬೇಕಾಗಿರುತ್ತದೆ. ತಪ್ಪು ಇದ್ದರೆ ತಪ್ಪು ಎಂದು ಹೇಳಬೇಕಾಗಿರುತ್ತದೆ. ಅಲ್ಲಿ ಇಂತಹ ೧೦೦-೧೫೦ ಮನೆಗಳು ಇದ್ದುವು. ನಾವು ಏನಿಸಿದ್ದೇನೆ ಇವರು ೫೭ ಮನೆಗಳು ಎಂದರೆ ನಾವು ಹೇಗೆ ಒಪ್ಪಿಕೊಳ್ಳುವುದು ? ಮಾನ್ಯ ಅಧ್ಯಕ್ಷರೇ ತಾವುಗಳು ಬನ್ನಿ, ಒಂದು ಸಮಿತಿಯನ್ನು ನೇಮಿಸಿರಿ. ಒಂದು ವೇಳೆ ನಾನು ಹೇಳಿದ್ದರಲ್ಲಿ ತಪ್ಪುಗಳು ಇದ್ದರೆ ನಾನು ರಾಜೀನಾಮೆ ಕೊಡುವುದಕ್ಕೆ ಸಿದ್ಧನಿದ್ದೇನೆ. ಅಲ್ಲಿ ಹೋಗಿ ನೋಡಿ. ಜನರು ಕಣ್ಣೀರು ಹಾಕುತ್ತಿದ್ದಾರೆ. ಬಡವರು ತಮ್ಮ ಜೀವಿತದ ದಿಂಡಿತದ ಹಣದಲ್ಲಿ ಕಷ್ಟಪಟ್ಟು ಮನೆಗಳನ್ನು ಕಟ್ಟಿಕೊಂಡಿದ್ದರು. ಒಬ್ಬ ಮಿಲಿಟರಿಯಲ್ಲಿ ಕೆಲಸ ಮಾಡುತ್ತಿದ್ದವರು ಕೂಡ ಇದ್ದಾರೆ.

(ಗದ್ದಲ)

ಶ್ರೀ ಎ. ಲಕ್ಷ್ಮೀಸಾಗರ್. —ಇದು ಕಾಲಿಂಗ್ ಅಟೆನ್‌ಷನ್ ಇದೇನು ? ಈ ರೀತಿ ನಡೆಯುತ್ತಿರುವುದು.

ಶ್ರೀ ಕೆ. ಹೆಚ್. ಶ್ರೀನಿವಾಸ್. —ಸಾರ್ವಜನಿಕರಿಗೆ ಸಂಬಂಧಪಟ್ಟ ವಿಷಯ ಇದು. ನಾವು ಇದನ್ನು ಕಾಲಿಂಗ್ ಅಟೆನ್‌ಷನ್‌ಗೆ ಕೊಟ್ಟಿದ್ದು ಸಮಯದ ಅಭಾವ ಇದ್ದುದರಿಂದ ಇಲ್ಲದಿದ್ದರೆ ನಿಲುವಳಿ ಸೂಚನೆಯನ್ನೆ ಕೊಡುತ್ತಿದ್ದೆವು. ಮನೆ ಕಳೆದುಕೊಂಡಿರುವವರ ಕೈಲಿ ಅಧಿಕೃತ ದಾಖಲೆಗಳಿವೆ. ಕೊಂಡಿರುವ ದಾಖಲೆಗಳಿವೆ. ಒಂದು ಪಕ್ಷ ಅದು ತಪ್ಪಾಗಿದ್ದರೆ ಅವರ ಮಾನವೊಲಿಸಿ ನೀವು ತೆಗೆಸ ಬೇಕಾಗಿತ್ತು. ಇಡೀ ಜೀವನದ ಸೇವಿಂಗ್ಸ್ ಹಾಕಿ ಕಟ್ಟಿದ್ದ ಮನೆಗಳನ್ನು ನೀವು ನೌಕರರಿಗೆ ಹೆಂಡ ಕಾಡಿಸಿ ತೆಗೆಸಿ ಹಾಕಿದ್ದೀರಲ್ಲ, ಇದು ಸರಿಯೇ ?

(ಗದ್ದಲ)

ಶ್ರೀ ಎ. ಲಕ್ಷ್ಮೀಸಾಗರ್ — ಸರ್ಕಾರದ ವತಿಯಿಂದ ಸಾಲದ ರೂಪದಲ್ಲಿ ನಿರ್ಗತಿಕರಿಗೆ ಮನೆ ಕಟ್ಟಿಸಿಕೊಡಬೇಕೆಂದಿದ್ದ ಜಾಗ ಅದು. ಐದಾರು ವರ್ಷಗಳಿಂದ ಅಲ್ಲಿ ಕಟ್ಟಬೇಡಿ ಎಂದು ಹೇಳುತ್ತಿದ್ದರೂ ಮನೆಗಳನ್ನು ಕಟ್ಟಿಕೊಂಡಿದ್ದಾರೆ.

(ಗದ್ದಲ)

ನನಗೆ ಅಧಿಕಾರಿಗಳು ತಪಾಸಣೆ ಮಾಡಿ ಕೊಟ್ಟಿರುವ ವರದಿಯನ್ನೇ ಇವರು ಸುಳ್ಳು ಎಂದರೆ ಇವರು ಹೇಳುವುದನ್ನು ನಿಜ ಎನ್ನಲೇ ?

(ಗದ್ದಲ)

ಶ್ರೀ ಎಂ. ಎಸ್, ಕೃಷ್ಣನ್.—ಹಿಂದೆ ಟೌನ್‌ಹಾಲ್‌ನಲ್ಲಿ ಈ ತರಹದ ವಿಷಯದ ಬಗ್ಗೆ ಒಂದು ಕಾನ್‌ಫೆರೆನ್ಸ್ ಮಾಡಿದ್ದರು. ಆಗ ಅಲ್ಲಿಗೆ ಈ ಜನವೂ ಬಂದಾಗ ಜನತಾ ಪಕ್ಷದ ಮುಖಂಡರು ನಿಮಗೆಲ್ಲ ಪುನರ್‌ವಸತಿ ಮಾಡಿಕೊಡುತ್ತೇವೆಂದು ಹೇಳಿ ಅವರನ್ನು ಕಳಿಸಿಕೊಟ್ಟಿದ್ದರು. ಮಾನ್ಯ ನಾರಾಯಣ ರಾವ್ ಇಲ್ಲೆ ಇದ್ದಾರೆ, ಬೇಕಾದರೆ ಕೇಳಿ.

ಶ್ರೀ ಎ.ಲಕ್ಷ್ಮೀಸಾಗರ್.—ಪುನರ್ವಸತಿ ಮಾಡಿಕೊಡುವುದಕ್ಕೆಂದೇ ಈ ಮನೆಗಳನ್ನು ತೆಗಿಸಿದ್ದುದು

(ಗದ್ದಲ)

ಅಧ್ಯಕ್ಷರು.—ಈ ವಿಷಯವನ್ನು ಇಲ್ಲಿಗೇ ಮುಕ್ತಾಯ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ತೆಗೆದುಕೊಂಡು ಹೋಗಿರುವ ಸಾಮಾನು ಗಳನ್ನಾದರೂ ಮರಳಿ ಕೊಡಿಸಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಏನಾದರೂ ಪರಿಹಾರ ಕೊಡಿಸಿ.

ಅಧ್ಯಕ್ಷರು.—ಈ ಸಭೆ ಇಲ್ಲಿಗೆ ಮುಕ್ತಾಯವಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಜನತಾ ಪಕ್ಷದ ಕಾರ್ಯಕ್ರಮ ಮನೆ ಕಟ್ಟಿಸಿಕೊಡುವುದೋ ಕೆಡವಿಹಾಕುವುದೋ ?

ಅಧ್ಯಕ್ಷರು.—ಈಗ ಸಭೆ ಮುಗಿಸೋಣ. ಒಳಕ್ಕೆ ಬನ್ನಿ ಮಾತನಾಡೋಣ.

ಅಧ್ಯಕ್ಷರು.—ಬೇಗ ಮುಗಿಸೋಣ ಎಂದು ನಾಲ್ಕು ಕಾಲಿಂಗ್ ಅಟೆನ್‌ಷನ್ ತಂದರೂ ಸಮಯ ಹೀಗೆ ವ್ಯಯ ಮಾಡಿದರೆ ಹೇಗೆ? ಈಗ ಈ ಸಬ್ಜೆಕ್ಟ್ ಕ್ಲೋಸ್ ಆಗಿದೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—೧೮೦ ಕುಟುಂಬದ ಜೀವನವೇ ಕ್ಲೋಸ್ ಆಗಿದೆ ಅಲ್ಲಿ.

ಅಧ್ಯಕ್ಷರು.—ಉತ್ತರ ಹೇಳಿದ್ದಾರೆ, ಅವರನ್ನು ನಾವು ಫೋರ್ಸ್ ಮಾಡುವ ಹಾಗಿಲ್ಲ.

(ಗೊಂದಲ)

MR. SPEAKER.—Govt. has given its reply.

ಶ್ರೀ ಎ. ಲಕ್ಷ್ಮೀಸಾಗರ್.—ನಮ್ಮ ಅಧಿಕಾರಿಗಳು ಯಾರೂ ತೆಗೆದುಕೊಂಡು ಹೋಗಿಲ್ಲ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಸದನ ಸಮಿತಿಯನ್ನು ಅಲ್ಲಿಗೆ ಕಳಂಹಿಸಿ.

ಶ್ರೀ ಎಂ.ಎಸ್. ಕೃಷ್ಣನ್.—ಸದನ ಸಮಿತಿ ಮಾಡಿ.

(ಗೊಂದಲ)

ಅಧ್ಯಕ್ಷರು.—ಸದನ ಸಮಿತಿಗೆ ಅವರು ಒಪ್ಪುವುದಿಲ್ಲ.

(ಗೊಂದಲ)

SRI A. LAKSHMI SAGAR.—I am not agreeing, it is not possible. ಅವರು ಹೇಳಿದ ಹಾಗೆ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ಕ್ಷೇತ್ರದ ಶಾಸಕರಾದ ಕೃಷ್ಣನ್‌ರವರು ಇದ್ದಾರೆ ಅವರು ಹೇಳುತ್ತಾರೆ ಸಾವಧಾನ ತೆಗೆದುಕೊಂಡು ಹೋಗಿದ್ದಾರೆ ಎಂದು. ಹಾಗೂ ಬೇರೆ ವಿಚಾರಗಳನ್ನೂ ಸಹ ಹೇಳಿದ್ದಾರೆ. ಮಾನ್ಯ ಸಚಿವರು ಹೇಳುತ್ತಾರೆ ಸಾವಧಾನ ತೆಗೆದುಕೊಂಡು ಹೋಗಿಲ್ಲವೆಂದು. ಇದು ಬೆಂಗಳೂರಿನಲ್ಲಿ ನಡೆದಿರತಕ್ಕಂತಹ ಪ್ರಸಂಗ ಅವರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿ ವಿಚಾರ ಮಾಡಿ ಒಂದರೆ ಏನು ಕಷ್ಟವಿದೆ ಎಂದು ಗೊತ್ತಾಗುತ್ತದೆ, ಜನತಾ ಮಂತ್ರಿಗಳು ಇವರು.....

ಶ್ರೀ ಎ. ಲಕ್ಷ್ಮೀಸಾಗರ್.—ಸರಕಾರದ ನಿಲುವನ್ನು ಹೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು,—ಈಗ ಈ ವಿಷಯ ಮುಕ್ತಾಯವಾಯಿತು.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮುಂದಕ್ಕೆ ಹೋಗುವುದಕ್ಕೆ ಖಂಡಿತವಾಗಿಯೂ ನಾನು ಬಿಡುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ

ಶ್ರೀ ಕೆ.ಹೆಚ್. ಶ್ರೀನಿವಾಸ್.—ಕೂಡುವುದಿಲ್ಲ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಎರಡು ಸಾರಿ ತಾವು ಈ ವಿಷಯವನ್ನು ಕ್ಲೋಸ್ ಮಾಡಿದ್ದೀರಿ ನೀವೆಲ್ಲಾ ಸೀನಿಯರ್ ಮೆಂಬರ್ಸ್.....

(ಗೊಂದಲ)

ಶ್ರೀ ಕೆ ಹೆಚ್ ಶ್ರೀನಿವಾಸ್.—ಸೀನಿಯರ್ ಮೆಂಬರ್‌ಗೆ ಏನು ಬೆಲೆ ಇದೆ. ನಾವು ಅವರನ್ನು ಕೇಳುತ್ತಿದ್ದೇವೆ ಅವರು ಉತ್ತರ ಕೊಡುತ್ತಿದ್ದಾರೆ.

(ಗೊಂದಲ)

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮೊಯಿಲಿಯವರು ಹೇಳಿದ ಹಾಗೆ ಮಾನ್ಯ ಶ್ರೀನಿವಾಸ್‌ರವರನ್ನು, ಶ್ರೀ ಕೃಷ್ಣನ್‌ರವರನ್ನು ಕರೆದುಕೊಂಡು ತಾವು ಮೂವರೂ ಹೋಗಿ ನೋಡಿಕೊಂಡು ಬರಬಹುದು ಆದಕ್ಕೇನು ತೊಂದರೆ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ನೋಡಿಕೊಂಡು ಬಂದಿದ್ದೇನೆ ಪುನಃ ಹೋಗುವ ಪ್ರಶ್ನೆ ಬರುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಶ್ರೀನಿವಾಸ್‌ರವರು ಅನುಭವೀ ಶಾಸಕರು ಸ್ಥಳ ನೋಡಿಕೊಂಡು ಒಂದು ಬಡವರ ಪರವಾಗಿ ಕಳಕಳಿ ವ್ಯಕ್ತಪಡಿಸಿದಾಗ ಸ್ಥಳ ತನಿಖೆ ಮಾಡೋಣವೆಂದು ಮಂತ್ರಿಗಳು ಹೇಳುವುದು ಬೇಡವೇ ಅಧಿಕಾರದಲ್ಲಿದ್ದೇವೆಂದು ಏನು ಬೇಕಾದರೂ ಹೇಳಬಹುದೇ?

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಆದಕ್ಕೆ ಕಬೊಲು ಇಲ್ಲ ಸರಕಾರದ ನಿಲುವನ್ನು ಹೇಳಿದ್ದೇನೆ. ಕೊಳಚೆ ಪ್ರದೇಶದವರಿಗೆ ಮನೆ ಕಟ್ಟಿಸುವುದಕ್ಕೆ ಈ ಜಾಗವನ್ನು ನಾವು ಉಪಯೋಗಿಸುತ್ತೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ಬಡವರ ಬಗ್ಗೆ ಈ ರೀತಿ ಉತ್ತರ ಕೊಟ್ಟರೆ ಈ ಸರಕಾರ ಹೆಚ್ಚಿಗೆ ದಿವಸ ಉಳಿಯುವುದಿಲ್ಲ. ಇದನ್ನು ನಾನು ಪ್ರತಿಭಟಿಸುತ್ತೇನೆ.

(ಗೊಂದಲ)

(ಈ ಹಂತದಲ್ಲಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕಾಂಗ್ರೆಸ್ (ಐ) ಸದಸ್ಯರು ಮತ್ತು ಸಿ.ಪಿ.ಐ. ಸದಸ್ಯರು ಸದನದ ವೆಲ್‌ನಲ್ಲಿ ಬಂದು ಧರಣಿ ಕುಳಿತರು.)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ನಾರಾಯಣರಾವ್‌ರವರು ಹಾಗೂ ಶ್ರೀ ಕೃಷ್ಣನ್, ಶ್ರೀ ಶ್ರೀನಿವಾಸ್ ರವರನ್ನು ತಾವು ಜೊತೆಯಲ್ಲಿ ಕರೆದುಕೊಂಡು ಹೋಗಿ ನೋಡಿಕೊಂಡು ಬರಲಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಶ್ರೀನಿವಾಸ್‌ರವರು, ಶ್ರೀ ಕೃಷ್ಣನ್‌ರವರು, ಶ್ರೀ ನಾರಾಯಣರಾವ್‌ರವರ ಜೊತೆಯಲ್ಲಿ ತಾವೂ ಹೋಗಿ ನೋಡಿಕೊಂಡು ಬಂದು ಆಮೇಲೆ ನಾಲ್ವರೂ ಕೂಡಿ ಒಂದು ತೀರ್ಮಾನಕ್ಕೆ ಬನ್ನಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ನೋಡಿಕೊಂಡೇ ಬಂದಿದ್ದೇನೆ. ಅವರಂ ಹೋಗಲಿ, ನನ್ನ ಅಭ್ಯಂತರ ಇಲ್ಲ. ನಾನು ನೋಡಿಕೊಂಡು ಬಂದಿದ್ದೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಇವರು ನೋಡಿಕೊಂಡಂ ಬಂದಿರುವುದು ಸರಿಯಿಲ್ಲ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಈ ರೀತಿ ಆದರೆ ಸರ್ಕಾರವನ್ನು ಹೇಗೆ ನಡೆಸುವುದಂ. ಅಧಿಕಾರವನ್ನು ಹೇಗೆ ನಡೆಸುವುದು?

ಅಧ್ಯಕ್ಷರು.—ಉಪನಾಯಕರ ಸಲಹೆ ಕೇಳಿ. ಶ್ರೀ ಎಂ.ಎಸ್. ನಾರಾಯಣರಾವ್, ಎಂ.ಎಸ್. ಕೃಷ್ಣನ್ ಮಂತ್ತು ಶ್ರೀ ಕೆ.ಹೆಚ್. ಶ್ರೀನಿವಾಸ್ ಈ ಮೂರು ಜನರನ್ನು ಕರೆದುಕೊಂಡಂ ಹೋಗಿ ಇನ್ನೊಮ್ಮೆ ನೋಡಿ; ಆ ಡಾಕ್ಯುಮೆಂಟನ್ನೂ ನೋಡಿ, ಸ್ಥಳ ಪರಿಶೀಲನೆ ಮಾಡಿ ಎಂದು ಹೇಳಂತ್ತಿದ್ದಾರೆ.

ಶ್ರೀ ಎ ಲಕ್ಷ್ಮೀಸಾಗರ್.—ನಾನಂ ನೋಡಿಕೊಂಡು ಬಂದಿದ್ದೇನೆ. ನಮ್ಮಲ್ಲಿದ್ದ ಕಾಗದಪತ್ರಗಳ ಪ್ರಕಾರ ತೆಗೆದು ಹಾಕಿದ್ದು ೫೭ ಮಂದಿಯನ್ನು ಇನ್ನು ಏನು ಹೋಗಿ ನೋಡುವುದು, ನಾವೆಲ್ಲಾ ಈ ಸಾರ್ವಜನಿಕ ಉಪಯೋಗಕ್ಕಾಗಿ ಜಮೀನನ್ನು ಪಶಪಡಿಸಿಕೊಳ್ಳುವುದಕ್ಕೆ ಆಗುವುದಿಲ್ಲ,

ಅಧ್ಯಕ್ಷರು.—ಈಗ ಏನಂ ಹೇಳುತ್ತಿದ್ದಾರೋ ಕೇಳಿ. ಆ ಮೂರು ಜನರನ್ನು ಕರೆದುಕೊಂಡಂ ಹೋಗಿ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಹೋಗಿ ನೋಡಿಕೊಂಡಂ ಬರಲಿ. ನನ್ನ ಅಭ್ಯಂತರ ಇಲ್ಲ, ಇಲ್ಲಿ ಈ ರೀತಿ ನಡೆದರೆ ನಾವು ಸರ್ಕಾರವನ್ನು ಹೇಗೆ ನಡೆಸಬೇಕು?

ಅಧ್ಯಕ್ಷರು.—ಕಾಗದ ಪತ್ರಗಳನ್ನು ನೋಡಿ ಎಂದು ಹೇಳಂತ್ತಿದ್ದಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಸದನದ ಸಮಿತಿಯನ್ನು ಮಾಡಿ.....

ಶ್ರೀ ಎ. ಲಕ್ಷ್ಮೀಸಾಗರ್.—ಸದನದ ಸಮಿತಿಗೆ ನಾನು ಒಪ್ಪುವುದಿಲ್ಲ.

ಅಧ್ಯಕ್ಷರು.—ಮಾನ್ಯ ರಾಚಯ್ಯನವರೇ, ಅವರ ಸಲಹೆ ಏನೆಂದರೆ, ಶ್ರೀ ನಾರಾಯಣರಾವ್, ಶ್ರೀ ಕೃಷ್ಣನ್ ಶ್ರೀ ಶ್ರೀನಿವಾಸ್ ಈ ಮೂರು ಜನಂದಿಯನ್ನು ಮಿನಿಸ್ಟರ್ ಕರೆದುಕೊಂಡು ಹೋಗಿ ಸ್ವಲ್ಪ ಎಕ್ಸ್‌ಪ್ಲೈನ್ ಮಾಡಿ, ಕಾಗದ ಪತ್ರಗಳನ್ನು ನೋಡಿ, ಅವರು ಹೇಳುವಂಥದ್ದನ್ನು ನೋಡಿ ಕೊಂಡಂ ಬನ್ನಿ.

(ಗೊಂದಲ)

ಅಧ್ಯಕ್ಷರು.— ಆ ಮೂರು ಮಂದಿಯನ್ನು ಕರೆದುಕೊಂಡು ಹೋಗಿ ನೋಡಿ ಎಂದು ಹೇಳುವುದಕ್ಕೆ ಹತ್ತಿದ್ದೇನೆ. ನಿಮ್ಮ ಮನವಿಗೆ ಒಪ್ಪಲಿಲ್ಲ, ಸಲಹೆ ಸೂಚನೆಗಳಿಗೆ ಕೇಳಲಿಲ್ಲ ಎಂದರೆ ನೀವು ವಾಕ್‌ಔಟ್ ಮಾಡಿ. ಪ್ರತಿಭಟನೆ ಮಾಡಿ. ಆದರೆ ಈ ರೀತಿ ಕೂಗುವುದು ಸರಿಯಲ್ಲ. ಡೆಮಾಕ್ರಟಿಕ್

ಪದ್ಧತಿಯನ್ನು ಅನುಸರಿಸಬೇಕು. ನಾನು ಹೇಳುವುದನ್ನು ಕೇಳಿ. ಆ ಮೂರು ಮಂದಿಯನ್ನು ಕರೆದುಕೊಂಡು ಹೋಗಿ ಸ್ಥಳ ಪರಿಶೀಲನೆ ಮಾಡಿ. ಎಕ್ಸಾಮಿನ್ ಮಾಡಿ ಎಂದು ಹೇಳಿದ್ದೇನೆ. ಅದಕ್ಕೆ ತಯಾರಾಗಿ ಇಲ್ಲ ಎಂದರೆ ನಾನು ಏನು ಮಾಡಲಿ. ? ಅದಕ್ಕೆ ನೀವು ಪ್ರತಿಭಟನೆ ಮಾಡಿ ವಾಕ್‌ಔಟ್ ಮಾಡಿ. ಈ ರೀತಿ ಕೂಗುವುದು ಸರಿಯಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ -- ತಮ್ಮ ಮಾತಿಗೂ ಕೂಡಾ ಅವರು ಬೆಲೆ ಕೊಡುತ್ತಿಲ್ಲ ಎಂದರೆ ಇದರ ಅರ್ಥವೇನು ?

ಅಧ್ಯಕ್ಷರು.-- ವಿರೋಧ ಪಕ್ಷದ ಉಪನಾಯಕರ ಸಲಹೆ ಏನಂ ಇದೆ, ಆ ಮೂರು ಮಂದಿಯನ್ನು ಕರೆದಂಕೊಂಡು ಹೋಗಿ ಸ್ಥಳ ಪರಿಶೀಲನೆ ಮಾಡಿ ಎಂದು ಹೇಳುತ್ತಿದ್ದಾರೆ.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.-- ತಾವು ಕೊಟ್ಟಂಥ ಸಲಹೆಗೂ ಕೂಡಾ ಮಾನ್ಯತೆ ಇಲ್ಲ. ಮನ್ನಣೆಯನ್ನು ಕೊಡುತ್ತಿಲ್ಲ. ಈ ರೀತಿ ಆದರೆ ಏನು ಅಸ್ತ್ರ ಇದೆ.

ಅಧ್ಯಕ್ಷರು.— ಬ್ರಹ್ಮಾಸ್ತ್ರ. ವಾಕ್‌ಔಟ್ ಮಾಡುವುದು. ನನಗೆ ಸರ್ಕಾರವನ್ನು ಕಂಪೆಲ್ ಮಾಡುವುದಕ್ಕಾಗುವುದಿಲ್ಲ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ.—ಪ್ರತಿ ಸಾರಿಗೂ ಸರ್ಕಾರವನ್ನು ಹೇಗೆ ನಡೆಸುವುದು ಎಂದು ಹೇಳಿದರೆ ಕೆಲವೊಂದೂ ಸಾರಿ ಬಗ್ಗಲೇ ಬೇಕಾಗುತ್ತದೆ, ತಗ್ಗಲೂ ಬೇಕಾಗುತ್ತದೆ. ಸರ್ಕಾರ ನಡೆಸುವುದು ಹೇಗೆ ಎಂದು ಹೇಳಿದರೆ ಕೃಷ್ಣನ್ ಹೇಳಿದ್ದಾದು ಸುಳ್ಳಿ, ಶ್ರೀನಿವಾಸ್ ಹೇಳಿದ್ದೂದು ಸುಳ್ಳಿ, ಸಾಮಾನುಗಳನ್ನು ದೋಚಿಕೊಂಡು ಹೋಗಿದ್ದಾರೆ ಎಂದು ಹೇಳಿದ್ದಾರೆ. ದೋಚಿಕೊಂಡು ಹೋಗಿಲ್ಲ ಎಂದು ಹೇಳುತ್ತೀರಿ ನೀವು ಹೋಗಿ ನೋಡಿದ್ದೀರಾ ? 'ಪ್ರಿಸ್ಟೀಜ್ ಪದ್ಮನಾಭನ್' ಆದರೆ ಸರ್ಕಾರ ನಡೆಸುವುದಕ್ಕೆ ಆಗುವುದೇ ಇಲ್ಲ. ಸಾಮಾನುಗಳನ್ನೆಲ್ಲಾ ದೋಚಿಕೊಂಡು ಹೋಗಿದ್ದಾರೆ ಬೀದಿಯಲ್ಲಿ ನಿಂತಿರತಕ್ಕಂಥ ಜನರು ಒಂದು ಕಡೆ. ಅವರ ಮನೆಯಲ್ಲಿ ಯಾರೂ ಇಲ್ಲ ನೋಡಿ, ಪಾಪ ಹೆಂಗಸರು, ಮಕ್ಕಳು ಅವರ ತಾಪತ್ರಯ ಗೊತ್ತಿಲ್ಲ. ಅವರಿಗೆ ಏನು ಗೊತ್ತಾಗಬೇಕು. ಅವರಿಗೆ ಇದು ಗೊತ್ತಿಲ್ಲ. ಆ ರಿಗೇನು ಗೊತ್ತಾಗುತ್ತದೆ. ಸಂಸಾರ ಇರುವವರಿಗೆ ಅವರ ಕಷ್ಟ ನಿನು ಎನ್ನುವುದು ಗೊತ್ತು. ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ಆ ಸದಸ್ಯರುಗಳನ್ನು ಆ ಸ್ಥಳಕ್ಕೆ ಕರೆದಂಕೊಂಡು ಹೋಗಿಬಿಟ್ಟು ನೋಡಿಕೊಂಡು ಬನ್ನಿ. ತಾವು ಹೋಗಿ ನೋಡಿಕೊಂಡು ನಮಗೆ ನ್ಯಾಯ ದೊರಕಿಸಿಕೊಡಿ.

ಅಧ್ಯಕ್ಷರು.-- ನೀವು ಅವರನ್ನು ಕರೆದುಕೊಂಡು ಹೋಗಿ ನೋಡಿ. ಅವರ ಕಾಗದ ಪತ್ರಗಳನ್ನು ನೋಡಿ.

ಶ್ರೀ ಎ. ಲಕ್ಷ್ಮೀಸಾಗರ್.-- ನಾನು ಕಾಗದ ಪತ್ರಗಳನ್ನು ನೋಡುವುದಕ್ಕಿಂತ ಮುಂಚಿತವಾಗಿ ಏನೂ ಹೇಳುವುದಕ್ಕಾಗುವುದಿಲ್ಲ. ನನ್ನ ಮೇಲೆ ಅವರು ಗಧಾಪ್ರಹಾರ ಮಾಡುವುದಕ್ಕೆ ಹೊರಟಿದ್ದಾರೆ. ಮುಖ್ಯವಾಗಿ ನಡೆದಿರತಕ್ಕಂಥಾದ್ದು ರಾಜಕೀಯವಾಗಿ ಗಧಾಪ್ರಹಾರ ಮಾಡುವುದಕ್ಕೆ ಕೆಲವು ಜನರು ಸೇರಿಸಿಕೊಂಡು ಇದನ್ನು ಒಂದು ದೊಡ್ಡ ಪ್ರಶ್ನೆಯನ್ನಾಗಿ ಮಾಡುವುದಕ್ಕೆ ಹೊರಟಿದ್ದಾರೆ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.-- ನಾವು ಕೇಳುವುದು ಒಂದು ಆದರೆ ಅವರು ಹೇಳುವುದು ಮತ್ತೊಂದು ಆಗಿದೆ

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಕೆಲವರ ಚಿತಾವಣೆ ಇದರಲ್ಲಿ ನಡೆದಿದೆ.....

ಅಧ್ಯಕ್ಷರು.-- ವಿರೋಧಪಕ್ಷದವರು ಹೇಳಿದಂತೆ ನೀವು ಮೂರು ಜನರನ್ನು ಕರೆದುಕೊಂಡು ಹೋಗಿ ನೋಡಿಕೊಂಡು ಬನ್ನಿ.

ಶ್ರೀ ಎ. ಲಕ್ಷ್ಮೀಸಾಗರ್ — ನಾನು ಮೊದಲೇ ಈ ಒಂದು ಮಾತನ್ನು ಹೇಳಿದ್ದೇನೆ. ಅವರು ಅಲ್ಲಿಗೆ ಹೋಗುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ.

ಅಧ್ಯಕ್ಷರು.— ನೀವೂ ಅಲ್ಲಿ ಹೋದರೆ ಕೆಲವು ಮಾಹಿತಿಗಳನ್ನು ಕೊಡುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.— ಅವರ ಹತ್ತಿರ ಏನು ಮಾಹಿತಿಗಳು ಇವೆ ಅದನ್ನು ಕೊಡಲಿ. ನಾನು ಅದನ್ನು ಎಕ್ಸ್‌ಪೆಂಡ್ ಮಾಡುತ್ತೇನೆ. ಅವರು ಹೇಳಿದ ಹಾಗೆ ನಾವು ಮಾಡಬೇಕು ಎಂದರೆ ಹಾಗೆ ಮಾಡಲಾಗುವುದಕ್ಕಾಗುವುದಿಲ್ಲ.

(೧೧—೧೨ ಜನರು ಕುಳಿತಿರತಕ್ಕಂಥ ಸ್ಥಳದಲ್ಲೇ ಮಾತನಾಡುತ್ತಿದ್ದರು.)

ಅಧ್ಯಕ್ಷರು.— ಮಾನ್ಯ ರಾಚಯ್ಯನವರೇ ನೀವು ಏನಾದರೂ ಹೇಳಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ಪ್ರತಿಯೊಂದು ಸಲಕ್ಕೂ ಅವರು ಹೀಗೆ ಮಾಡಿದರೆ it becomes precedent: I cannot agree to this suggestion. Government has to function.....

ಶ್ರೀ ಎ ಮಲ್ಲಿಕಾರ್ಜುನ ಖರ್ಗೆ.— ನಾವು ಇದಕ್ಕೇನಾದರೂ ರಿಲೀಫ್ ಕೊಡಿ ಎಂದರೆ ನಾವು ಇದನ್ನು ಪ್ರಿಸ್ಟೀಜ್ ಇಷ್ಯೂ ಹಾಗೆ ತೆಗೆದುಕೊಂಡರೆ ಹೇಗೆ ?

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.— ಮಾನ್ಯ ಅಧ್ಯಕ್ಷರೇ, ಈ ಕಡೆಯವರು ಈ ರೀತಿಯಾಗಿ ಧರಣಿ ಕುಳಿತುಕೊಂಡಿರುವುದು ದಿಸ್ ಈಸ್ ದಿ ಫಸ್ಟ್ ಟೈಂ. ಆದಷ್ಟುಮಟ್ಟಿಗೆ ಪ್ರಾರಂಭದಿಂದಲೂ ಎಂತಹ ಗಂಭೀರವಾದ ಪ್ರಶ್ನೆ ಬಂದರೂ ಕೂಡ ಬಹಳ ಸಂಯಮದಿಂದ ನಾವು ವರ್ತಿಸಿದ್ದೇವೆ. ಈ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಯಾವ ರೀತಿಯಲ್ಲೂ ಅಡ್ಡಿ ಮಾಡಬಾರದು ಎಂದು ಇದು ವರೆಗೂ ಸಂಯಮದಿಂದ ನಾವು ವರ್ತನೆ ಮಾಡಿದ್ದೇವೆ. ಇವೊತ್ತಿನ ದಿವಸ ಇಲ್ಲಿರತಕ್ಕಂಥವಾದ್ದು ಬಹಳ ಸಣ್ಣ ವಿಚಾರ. ಇದೇನೂ ಪರಿಹಾರ ಮಾಡದೇ ಇರತಕ್ಕಂಥ ವಿಚಾರವಲ್ಲ. ಇವೊತ್ತು ಯಾವುದೇ ಕಾರ್ಯಕ್ರಮಗಳು ಇದ್ದರೂ ಕೂಡ ಅದನ್ನು ತಡೆಹಿಡಿದು ಮಾನ್ಯ ಕೆ. ಹೆಚ್. ಶ್ರೀನಿವಾಸ್‌ರವರು ಹೇಳಿದಂತೆ ಮಾಡಿದರೆ ಒಳ್ಳೆಯದು ತಾವು ಹೇಳಿದಿರಿ ವಾಕ್‌ಔಟ್ ಮಾಡಿರಿ ಎಂದು.. ನಾವು ವಾಕ್‌ಔಟ್ ಮಾಡುವುದು ಅದು ಪೆಲ್ಟೆ ಅದ ಹಾಗೆ ಆಯಿತು. ವಾಕ್‌ಔಟ್ ಮಾಡುವುದು ದೊಡ್ಡ ವಿಚಾರವಲ್ಲ. ಇದರಲ್ಲಿ ವಿಷಯ ಇರುವುದು ಇಷ್ಟೆ. ಸನ್ಮಾನ್ಯ ಶ್ರೀ ಎ. ಲಕ್ಷ್ಮೀಸಾಗರ್‌ರವರು ಈ ರೀತಿಯಾಗಿ ರಾಜಕೀಯ ಗಧಾಪ್ರಹಾರ ಮಾಡತಕ್ಕಂಥ ಒಂದು ಒಳಸಂಚು ನಡೆಯುತ್ತಾ ಇದೆ ಎಂದು ಹೇಳಿದರು. ಅವರ ಪಕ್ಷದಲ್ಲಿ ರಾಜಕೀಯ ಇರಬಹುದು. ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಟಿ. ಆರ್. ಶಾಮಣ್ಣನವರು ವಿಧಾನಸೌಧದ ಮುಂದೆಯೇ ಧರಣಿ ಕುಳಿತರು. ಅದು ಅವರ ಪಕ್ಷದ ಪ್ರಶ್ನೆ, ತಾವು ಏತಕ್ಕೆ ಮಾತನಾಡುತ್ತೀರಿ ? ತಮ್ಮ ಪಕ್ಷದಲ್ಲೇ ಸರಿಯಾಗಿಲ್ಲ. ತಮ್ಮ ಪಕ್ಷದಲ್ಲೆ ಒಳಸಂಚು ಇದೆ ಅದನ್ನು ಪರಿಹಾರ ಮಾಡುವ ಕರ್ತವ್ಯ ಅವರ ಮೇಲೆ ಇದೆ. ವಿರೋಧ ಪಕ್ಷದವರನ್ನು ಪ್ರತಿಪಕ್ಷದವರ ಮೇಲೆ ಈ ತರಹ ಗಧಾಪ್ರಹಾರ ಮಾಡುತ್ತಿದ್ದಾರೆ ಎಂದು ಹೇಳುವುದು ಸರಿಯಲ್ಲ. ಅವರು ಒಂದು ಸೂಚನೆ ಕೊಟ್ಟಿದ್ದಾರೆ. ಅದನ್ನು ಪರಿಹರಿಸುವುದು ಒಂದು ದೊಡ್ಡ ಸವಂಸ್ಯೆಯಾಗುವುದಿಲ್ಲ. ಮಾನ್ಯ ಎಂ. ಎಸ್. ಕೃಷ್ಣನ್‌ರವರು ಇದ್ದಾರೆ. ಶ್ರೀ ಶ್ರೀನಿವಾಸ್‌ರವರು ಇದ್ದಾರೆ, ಶ್ರೀ ಎಂ. ಎಸ್. ನಾರಾಯಣರಾವ್ ಅವರು ಇದ್ದಾರೆ. ಅವರನ್ನು ಕರೆದುಕೊಂಡು ಹೋಗಿ.

೪-೦೦ ಪಿ.ಎಂ.

ಮಾನ್ಯ ಮಂತ್ರಿಗಳ ವರದಿಯ ಪ್ರಕಾರ ೧೭ ಮನೆಗಳನ್ನು ಕೆಡವಿ ಹಾಕಿದ್ದಾರೆ ಮಾನ್ಯ ಹಿರಿಯ ಸದಸ್ಯರಾದ ಶ್ರೀ ಶ್ರೀನಿವಾಸ್ ಅವರು ೧೩೦ ಮನೆಗಳನ್ನು ಅಲ್ಲಿ ಕೆಡವಿಹಾಕಿದ್ದಾರೆಂದು ಹೇಳಿದ್ದಾರೆ. ತಾವು ಹೇಳಿದ್ದಕ್ಕಿಂತ ಒಂದು ಮನೆ ಕಡಿಮೆಯಾಗಿದ್ದರೂ ಸಹ ನಾನು ನನ್ನ ತಾಸಕ ಸ್ಥಾನಕ್ಕೆ

ರಾಜೀನಾಮೆ ಕೊಡುವುದಾಗಿ ಮಾನ್ಯ ಶ್ರೀನಿವಾಸ್ ಅವರು ಹೇಳಿದ್ದಾರೆ. ಮಾನ್ಯ ಶ್ರೀನಿವಾಸ್ ಅವರು ಸಹ ಆ ಸ್ಥಳಕ್ಕೆ ಹೋಗಿ ಬಂದಿರುವುದರಿಂದ ನಾವು ಇವರ ಮಾತನ್ನೂ ಸಹ ನಂಬಬೇಕಾಗುತ್ತದೆ.

(ಗೊಂದಲ)

ಇಂತಹ ಪ್ರಕರಣ ಬೆಂಗಳೂರಿಂ ನಗರದಲ್ಲಿ ಪ್ರಥಮ ಭಾರಿ ನಡೆದಿಲ್ಲ. ಇಂಥಾದ್ದು ಅನೇಕ ಸಲ ನಡೆದಿದೆ. ಈ ಬಗ್ಗೆ ಮಾನ್ಯ ಕೃಷ್ಣನ್ ಅವರು ಬಹಳ ವಿವರವಾಗಿ ಹೇಳಿದ್ದಾರೆ. ಇದಕ್ಕೆ ಏನಾದರೂ ಪ್ರಭಲ ವಾದಂಥ ಕಾರಣಗಳು ಇರಬೇಕು. ಇಂತಹ ಪ್ರಕರಣಗಳು ನಡೆದಾಗ ನಾವು ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಯಾವುದೇ ಒಂದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಈ ವೇದಿಕೆಯನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಪ್ರತಿಯೊಬ್ಬ ಸದಸ್ಯರಿಗೂ ಹಕ್ಕಿದೆ. ಅವರವರ ಕ್ಷೇತ್ರದ ಸಮಸ್ಯೆಗಳು ಬಂದಾಗ ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಈ ನಮ್ಮ ಹಕ್ಕನ್ನು ನೀವು ರಕ್ಷಣೆ ಮಾಡಬೇಕಾಗುತ್ತದೆ. ಸರ್ಕಾರ ಯಾವಾಗ ತನ್ನ ಕರ್ತವ್ಯವನ್ನು ಸರಿಯಾಗಿ ಚಲಾವಣೆ ಮಾಡುವುದಿಲ್ಲ, ಆಗ ನೀವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ.

(ಗೊಂದಲ)

ಈಗಾಗಲೇ ಮಾನ್ಯ ಕೃಷ್ಣನ್ ಅವರು ತಮ್ಮ ವಾದವನ್ನು ಈ ಬಗ್ಗೆ ಪರಿಣಾಮಕಾರಿಯಾಗಿ ಮಂಡನೆ ಮಾಡಿದ್ದಾರೆ. ಅವರ ವಾದವನ್ನು ನಾವು ಸಹ ಒಪ್ಪಿದ್ದೀರಿ.

(ಗೊಂದಲ)

ಮಾನ್ಯ ಸಚಿವರು ಈ ನಮ್ಮ ಸೂಚನೆಯನ್ನು ಪ್ರಜಾಪ್ರಭುತ್ವವಾದಿಯಾಗಿ ಸ್ವೀಕಾರ ಮಾಡಿದಲ್ಲಿ ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ವಾಪಸ್ ಬರುತ್ತಾರೆ. ನಾವು ಈ ಜನತಾ ಪಕ್ಷದ ಸರ್ಕಾರಕ್ಕೆ ಅಂತಹ ದೊಡ್ಡ ಸವಾಲನ್ನು ಒಡ್ಡಿಲ್ಲ. ಇದು ಕೇವಲ ಒಂದು ಕ್ಷೇತ್ರದ ಸಮಸ್ಯೆ ಆಗಿದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ರಘುಪತಿಯವರು ಇದರ ಬಗ್ಗೆ ಏನೋ ಹೇಳಲು ನಿಂತಿದ್ದಾರೆ. ಅವರ ಅಭಿಪ್ರಾಯವನ್ನು ಸಹ ನಾವು ಕೇಳೋಣ.

ಶ್ರೀ ಬಿ. ಬಸವಲಿಂಗಪ್ಪ.—ಸಭೆ ಈಗ ಆರ್ಡರ್‌ನಲ್ಲಿ ಇಲ್ಲ. ಆದ್ದರಿಂದ ಅವರು ಯಾವ ರೀತಿ ಅಭಿಪ್ರಾಯ ಕೊಡುತ್ತಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅವರ ಅಭಿಪ್ರಾಯದಲ್ಲಿ ಸಭೆ ಆರ್ಡರ್‌ನಲ್ಲಿ ಇದೆ.

(ಗೊಂದಲ)

ಶ್ರೀ ಎಂ. ರಘುಪತಿ.—ಈಗ ನಾನು ಎರಡು ಸಲಹೆಗಳನ್ನು ಅವರ ಗಮನಕ್ಕೆ ತರುತ್ತೇನೆ. ಏನೆಂದರೆ, ಮಾನ್ಯ ಮಂತ್ರಿಗಳು ಬಿ.ಡಿ.ಎ. ಅಧಿಕಾರಿಗಳನ್ನು ಮತ್ತು ಕೊಳಚೆ ನಿರ್ಮೂಲನಾ ಮಂಡಲಿಯ ಅಧಿಕಾರಿಗಳನ್ನು ಜೊತೆಯಲ್ಲಿ ಕರೆದುಕೊಂಡು ಆ ಸ್ಥಳಕ್ಕೆ ಹೋಗಿ ಖುದ್ದಾಗಿ ಸ್ಥಳ ಪರಿಶೀಲನೆಯನ್ನು ಮಾಡಿ ಸೋಮವಾರ ದಿವಸ ಈ ಸಭೆಗೆ ಒಂದು ಮಾಹಿತಿಯನ್ನು ಕೊಡಲಿ.

(ಗೊಂದಲ)

ಅಧ್ಯಕ್ಷರು.—ಸ್ವಲ್ಪ ಶಾಂತವಾಗಿ ಅವರು ಏನು ಹೇಳುತ್ತಾರೋ ಅದನ್ನು ಕೇಳಿ.

(ಗೊಂದಲ)

ಶ್ರೀ ಎಂ. ರಘುಪತಿ.—ಇಲ್ಲ ಅಂದರೆ ಸ್ಪಂಬೋರ್ಡ್ ಛೇರ್ಮನ್ ಮತ್ತು ಬಿ.ಡಿ.ಎ. ಛೇರ್ಮನ್ ಇವರಿಬ್ಬರೂ ವಿಸಿಟ್ ಮಾಡಲಿ, ವಿಸಿಟ್ ಮಾಡಿ.....

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಿಮ್ಮ ಮೇಲೆ ನಮಗೆ ಸಂಬಿಕೆ ಇದೆ, ಬೇಕಾದರೆ ರಘುಪತಿಯವರನ್ನೇ ಕಳಿಸಿ, ಬೇಡ ಎಂದು ಹೇಳುವುದಿಲ್ಲ. ಮಾನ್ಯ ರಘುಪತಿಯವರು, ಎಂ. ಎಸ್. ಕೃಷ್ಣನ್

ರವರು, ಎಂ. ಎಸ್. ನಾರಾಯಣರಾವ್‌ರವರಂ, ಕೆ. ಹೆಚ್. ಶ್ರೀನಿವಾಸ್‌ರವರಂ ಮಂತಾದ ೫ ಜನರನ್ನು ಕಳುಹಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸಚಿವರಿಗೆ ಪ್ರತಿಷ್ಠೆ ಇದೆ, ಬೇಕಾದರೆ ಅವರಂ ಹೋಗುವುದು ಬೇಡ. ಈ ೪ ಜನ ಸದಸ್ಯರು ಹೋಗಲಿ. ಮಾನ್ಯ ರಘುಪತಿಯವರು, ಶ್ರೀನಿವಾಸ್‌ರವರು, ನಾರಾಯಣರಾವ್‌ರವರು, ಕೃಷ್ಣನ್‌ರವರು ಹೋಗಲಿ, ಆದಕ್ಕೆ ನಾವು ಒಪ್ಪುತ್ತೇವೆ. ಆಷ್ಟು ಮಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಮಂತ್ರಿಗಳು ಹೋಗಲಿಕ್ಕೆ ಆಲರ್ಜಿ ಇದ್ದರೆ ಬೇಡ. ರಘುಪತಿಯವರು ಅವರ ಪಕ್ಷದವರೇ ಇದ್ದಾರೆ, ನಾರಾಯಣರಾಯರು ಅವರ ಪಕ್ಷದವರೇ ಇದ್ದಾರೆ, ಸಿಪಿಐನವರು ಕೃಷ್ಣನ್‌ರವರು ಇದ್ದಾರೆ. ನಮ್ಮ ಶ್ರೀನಿವಾಸ್‌ರವರು ಇದ್ದಾರೆ. ನಮಗೆ ರಾಜಕೀಯ ಮಾಡುತ್ತಾರೆ ಎಂದು ಅವರು ಹೇಳುತ್ತಾರೆ. ಆದಕ್ಕೋಸ್ಕರ ನಮ್ಮ ಪಾರ್ಟಿಯವರು ಒಬ್ಬರೇ ಒಬ್ಬರು ಬರುತ್ತಾರೆ, ಬೇಡ ಅಂದರೆ ಅವರೂ ಕೂಡ ಬರುವುದಿಲ್ಲ ಇಲ್ಲದೇ ಹೋದರೆ ಕೃಷ್ಣನ್‌ರವರು, ರಘುಪತಿಯವರು ಇಬ್ಬರೇ ಹೋಗಲಿ, ವಿಸಿಟ್ ಮಾಡಿಕೊಂಡು ಬಂದು ಸದನಕ್ಕೆ ರಿಪೋರ್ಟ್ ಕೊಡಲಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಸದನದ ಸಮಿತಿಯಂನ್ನು ನೇಮಕ ಮಾಡಿಕೊಳ್ಳುವುದಕ್ಕೆ ನಾನೆ ಒಪ್ಪಿಗೆ ಕೊಡುವುದಿಲ್ಲ. ನನ್ನ ಅಭಿಪ್ರಾಯವನ್ನು ತಮಗೆ ಬಹಳ ಕ್ಲಿಪ್ತವಾಗಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. I am not going to be a party for the appointment of a House Committee. I have already made my submission. If the Members of the House, if they want to go and make a study I have myself done it, according to my understanding, according to my feeling and my light, there is no need for me to go there. This is my honest opinion. If other members want to go I cannot prevent them from going. Let them give me, what they want to say. I will examine it. This is all my submission. Sir, it becomes impossible for any Government to function. It becomes impossible to perform any action of the Government. ಎಲ್ಲದಕ್ಕೂ ನೀವು ಮಂತ್ರಿಗಳನ್ನು ಕರೆದುಕೊಂಡು ಹೋಗಿ ಸ್ಥಳ ಪರಿಶೀಲನೆ ಮಾಡಿ ಎಂದರೆ ಹೇಗೆ. ಬೆಂಗಳೂರಿನಲ್ಲಿ ಅನೇಕ ಕಡೆ ಅನಧಿಕೃತ ಕಟ್ಟಡಗಳನ್ನು ಬಿ.ಡಿ.ಎ.ನವರು ತೆಗೆಯುತ್ತಾರೆ, ಕಾರ್ಪೊರೇಷನ್‌ನವರು ತೆಗೆಯುತ್ತಾರೆ, ಸ್ಲಂಬೋರ್ಡಿನವರು ತೆಗೆಯುತ್ತಾರೆ. In fact law enjoins upon them the right—...ನೀವು ಪ್ರತಿಯೊಂದು ಕಡೆಗೂ ಕಾನೂನು ಮಂತ್ರಿ ಬರಲಿ ಅಥವಾ ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಯವರು ಬರಲಿ, ಆಮೇಲೆ ರಾಚಯ್ಯನವರು ಬರಲಿ ಎಂದು ಹೇಳುವುದಕ್ಕೆ ಬರುವುದಿಲ್ಲ. No party can function under the sun if pressures are brought like this. This is my submission. This is my honest feeling. If the other Members of the House if they want to go in their individual capacity or in group, let them go, I cannot prevent them, let them give me their representation, their version, what they want to say, I will examine it. More than this I cannot say anything, I should not say anything. They cannot prevent the Government from functioning. They are not the ruling party.

ಶ್ರೀ ಎಸ್. ಕೆ. ಕಾಂತಾ.—ಅವರು ಹೋಗಿ ಬರಲಿ, ಹೋಗಿ ಬಂದು ಏನು ಹೇಳುತ್ತಾರೋ ಅದನ್ನು ಎಕ್ಸಾಮಿನ್ ಮಾಡುತ್ತೇನೆಂದು ಹೇಳುತ್ತಾ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈ ಪ್ರಶ್ನೆ ಏಕೆ ಬಂತು ಅಂದರೆ ಮಾನ್ಯ ಶ್ರೀನಿವಾಸ್‌ರವರು ಖುದ್ದಾಗಿ ಆ ಸ್ಥಳ ಪರೀಕ್ಷೆ ಮಾಡಿ ಪ್ರತಿಯೊಂದು ಮನೆಮನೆಗೂ ಹೋಗಿ ೧೬೦ ಮನೆಗಳನ್ನು ಒಡೆದು ತೆಗೆದಿದ್ದಾರೆ ಎಂದು ಹೇಳುತ್ತಾ ಇದ್ದಾರೆ. ಅದೇ ರೀತಿಯಾಗಿ ಮಾನ್ಯ ಕೃಷ್ಣನ್‌ರವರೂ ಕೂಡ ವಿಸಿಟ್ ಮಾಡಿದ್ದಾರೆ, ಅದು ಅವರ ಕ್ಷೇತ್ರದಲ್ಲಿ ಬರತಕ್ಕಂಥಾದ್ದು. ಅವರೂ ನೋಡಿಕೊಂಡು ಬಂದು ಹೇಳುತ್ತಾ ಇದ್ದಾರೆ. ಮಾನ್ಯ ಮಂತ್ರಿಗಳೂ ನಾನೂ ಕೂಡ ಖುದ್ದಾಗಿ ಹೋಗಿದ್ದೇನೆ, ಸ್ವಂತವಾಗಿ ಹೋಗಿದ್ದೇನೆ, ಕೇವಲ ೫೭ ಮನೆಗಳನ್ನು ಮಾತ್ರ ಒಡೆದಿದೆ, ಬೇರೆಯವರಿಗೆ ತೊಂದರೆಯಾಗಿಲ್ಲ ಎಂದು ಹೇಳುತ್ತಾ ಇದ್ದಾರೆ. ೫೭ ಮನೆಗಳನ್ನು ನೀವು ಖುದ್ದಾಗಿ ನೋಡಿದ್ದೀರಿ. ನಾನಂ ಹೇಳುವಂತಾದ್ದಲ್ಲಿ ಸುಳ್ಳಾದರೆ ರಾಜೀನಾಮೆ ಕೊಡತಕ್ಕ ಮಾತನ್ನು ಅವರು ಹೇಳಿದ್ದಾರೆ. ಅವರೇನೂ ಹೊಸ ಸದಸ್ಯರಲ್ಲ, ಪದೇ ಪದೇ ಆಪಾದನೆ ಮಾಡತಕ್ಕವರೂ ಅಲ್ಲ. ೧೯೭೨ನೇ ಇಸವಿಯಿಂದ ಈ ಮನೆಯಲ್ಲಿ ಸದಸ್ಯರಿದ್ದಾರೆ. ಈ ಒಂದು ವಿಷಯವನ್ನು ಮತ್ತು ಪ್ರಶ್ನೆಯನ್ನು ಬಗೆಹರಿಸಬೇಕು ಈ ಸಮಸ್ಯೆಯನ್ನು ಬಗೆಹರಿಸಬೇಕೆಂಬ ದೃಷ್ಟಿಯಿಂದ ಅವರು ಸೂಚನೆ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ನಾನು ಅಲ್ಲಿಗೆ ಹೋಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಮೈಸೂರಿನಲ್ಲಿ ಹಿಂದೆ ಇಂಥ ಘಟನೆ ನಡೆದಾಗ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟರೂ ಕೂಡ ಇದುವರೆವಿಗೂ ಕ್ರಮ ತೆಗೆದುಕೊಂಡಿಲ್ಲ. ಆಗ ಒಟ್ಟು ಎರಡು ಸಾವಿರ ಮನೆಗಳನ್ನು ಹೊಡೆದು ಹಾಕಿದ್ದರು. ಬೀದರ್‌ನಲ್ಲಿ ನಡೆದಿದೆ, ಹುಬ್ಬಳ್ಳಿ ಧಾರವಾಡದಲ್ಲಿ ನಡೆಯಿತು. ಪ್ರತಿಯೊಂದು ಸಂದರ್ಭದಲ್ಲಿ ಎಕ್ಸಾಮಿನ್ ಮಾಡುತ್ತೇನೆ, ನೋಡುತ್ತೇನೆಂದು ಹೇಳಿದರೂ ಕೂಡ ಆಕ್ಷನ್ ತೆಗೆದುಕೊಂಡಿಲ್ಲ. ಸದನದ ಸದಸ್ಯರುಗಳು ಹೋಗಿ ನೋಡುವುದರಲ್ಲಿ ತಪ್ಪೇನಿದೆ ? ಇದರಲ್ಲಿ ರಾಜಕೀಯ ಏನಿದೆ ? ಅವರನ್ನು ಅಧಿಕಾರದಿಂದ ತೆಗೆದು ನಾವು ಆಗಬೇಕೆಂಬುದು ಏನಿದೆ ? ಅವರಿಗೆ ಸ್ವಲ್ಪ ವಿವೇಚನೆ ತಾವು ಹೇಳಿ.

ಶ್ರೀ ಎಂ. ರಘುಪತಿ.— ನಾನು ಪ್ರಾರ್ಥನೆ ಮಾಡುವುದೇನೆಂದರೆ, ನಾಳೆ ಬಿ. ಡಿ. ಎ. ಅಧ್ಯಕ್ಷರು ಮಂತ್ರಿ ಸ್ಲಂ ಬೋರ್ಡ್ ಅಧ್ಯಕ್ಷರು ಸ್ಥಳಕ್ಕೆ ಭೇಟಿ ಕೊಡಲಿ.

(ಗೊಂದಲ)

ಶ್ರೀಮತಿ ಮುಕ್ತರಂನ್ನೀಸಾ.— ಸ್ವಾಮಿ, ಮೈಸೂರಿನಲ್ಲಿ ಎರಡು ಸಾವಿರ ಮನೆಗಳನ್ನು ನಾಶ ಮಾಡಿ ಎರಡು ವರ್ಷವಾಗಿದ್ದರೂ ಇದುವರೆಗೆ ಏನು ಪರಿಹಾರ ಕೊಟ್ಟಿಲ್ಲ.

ಶ್ರೀ ಎಂ. ರಘುಪತಿ.— ಯಾವುದೇ ಪರಿಹಾರ ಕೊಡುವ ವಿಚಾರವೇ ಆಗಲೀ, ಮಾನ್ಯ ಸದಸ್ಯರುಗಳು ಮೊದಲು ಅವರವರ ಸ್ಥಳದಲ್ಲಿ ಹೋಗಿ ಕಂಳಿತುಕೊಳ್ಳಲಿ.

ಶ್ರೀಮತಿ ಮುಕ್ತರಂನ್ನೀಸಾ.— ಅದೆಲ್ಲಾ ಆಗುವುದಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಸ್ಥಳದಲ್ಲಿ ಕುಳಿತುಕೊಂಡು ಏನನ್ನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ರಘುಪತಿ.— ಸ್ವಾಮಿ, ಈ ರೀತಿ ಆದರೆ ಸದನ ಹೇಗೆ ನಡೆಸುವುದಕ್ಕಾಗುತ್ತದೆ. ಯಾವರೀತಿಯ ಡಿಸ್‌ಕಷನ್ ಬೇಕಾದರೂ ಮಾಡಿ, ಯಾವಸಲಹೆಗಳನ್ನು ಬೇಕಾದರೂ ಕೊಡಲಿ, ನಾವು ಕೂಡ ಸಹಕಾರ ಕೊಡುತ್ತೇವೆ, ಆದರೆ, ಈ ರೀತಿ ಮಾಡುವುದು ಸರಿಯಲ್ಲ. ಇದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ. ಸ್ಥಳದಲ್ಲಿ ಕುಳಿತುಕೊಂಡು ಚರ್ಚೆ ಮಾಡಲಿ ಈ ರೀತಿ ಸದನ ನಡೆಸಿಕೊಂಡು ಹೋದರೆ ಭೂಷಣವಾಗುವುದಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.— ಅಧ್ಯಕ್ಷರೆ, ಮಾನ್ಯ ಚನ್ನಬಸಪ್ಪನವರು ಹಿಂದೆ ಲೋಕೋಪಯೋಗಿ ಇಲಾಖಾ ಮಂತ್ರಿಗಳಾಗಿದ್ದಾಗ ಇವರಿಗೆ ಪ್ರತಿಷ್ಠೆ ಬೇಡ. ಮಾನ್ಯ ಚನ್ನಬಸಪ್ಪನವರಂ ಲೋಕೋಪಯೋಗಿ ಇಲಾಖಾ ಮಂತ್ರಿಗಳು ಆಗಿದ್ದಾಗ ಒಂದು ಕಟ್ಟಡದ ಬಗ್ಗೆ, ಈ ಸದನದಲ್ಲಿ ಪ್ರಸ್ತಾಪ ಬಂತು. ಆ ಸಂದರ್ಭದಲ್ಲಿ ಮಾನ್ಯ ಚನ್ನಬಸಪ್ಪನವರು ಸದಸ್ಯರನ್ನು ಕರೆದುಕೊಂಡು ಹೋಗಿ ತೋರಿಸಿ

ಹುಂದೆ ವಿಚಾರಣೆ ನಡೆಸಿದರು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದರು. ಈಗ ಪ್ರತಿಷ್ಠೆ ಪ್ರಶ್ನೆ ವಿತಕ್ಕೆ ಇಷ್ಟೊಂದು ಈ ವಿಷಯವನ್ನು ಎಳೆಯಂಲಿಕ್ಕೆ ಹೋದರೆ ತುಂಡಾಗುತ್ತದೆ.

(ಗೊಂದಲ)

ಅಧ್ಯಕ್ಷರು.— ಸಭೆಯನ್ನು ಹತ್ತು ನಿಮಿಷ ಮುಂದೆ ಹಾಕುತ್ತೇನೆ.....

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಇವರ ಮೇಲೆ ನನಗೆ ವಿತಕ್ಕೆ ನಂಬಿಕೆ ಇಲ್ಲ ಎಂದರೆ ಇವರು ಮೈಸೂರಿನಲ್ಲಿ ಕಾರ್ಪೋರೇಷನ್ ಎಲೆಕ್ಷನ್‌ನಲ್ಲಿ ಗೆಲ್ಲುವವರೆಗೂ ಆ ಬಡ ಜನರಿಗೆ ಎಲ್ಲಾ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದರು. ಕಾರ್ಪೊರೇಷನ್ ಎಲೆಕ್ಷನ್‌ನಲ್ಲಿ ಗೆದ್ದು ಬಂದ ಮೇಲೆ ಬುಲ್ಡೋಜರ್ ತೆಗೆದುಕೊಂಡಂ ಹೋಗಿ ನೆಲಸಮ ಮಾಡಿಸಿದರು. ಅವರಿಗೆ ಇದುವರೆಗೂ ಪರಿಹಾರ ಕೊಟ್ಟಿಲ್ಲ. ಇವರಂ ಬಾಯಲ್ಲಿ ಹೇಳುವುದು ಒಂದು ಮಾಡುವುದು ಒಂದು, ಆದ್ದರಿಂದ ಇವರ ಬಗ್ಗೆ ನಂಬಿಕೆ ಇಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.— ಇದರಲ್ಲಿ ಯಾವುದೇ ರಾಜಕೀಯ ಇಲ್ಲ.

(ಗೊಂದಲ)

ಅಧ್ಯಕ್ಷರು.— ಈಗ ಇಲ್ಲಿ ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಕೆ. ಎಚ್. ಶ್ರೀನಿವಾಸ್.— ನಿಮ್ಮ ಪರವಾಗಿ ಸಾಗರ್ ಅವರಂ ಸಹಾಯ ಮಾಡುತ್ತಾರೆ ಎಂದು ಹೇಳಿ ಬಂದಿದ್ದೇನೆ.

(ಗೊಂದಲ)

ಶ್ರೀಮಂತಿ ಮುಕ್ತರಂನ್ನೇಸಾ.— ಮೈಸೂರಿನಲ್ಲಿ ಎರಡು ವರ್ಷಗಳಿಂದಲೂ ಒಂದು ಸಾವಿರ ಹಂಸಿಗಳ ವಿಚಾರ ತೀರ್ಮಾನ ಮಾಡಿಲ್ಲ.

(ಗೊಂದಲ)

ಅಧ್ಯಕ್ಷರು.— ಈಗ ಸಭೆಯನ್ನು ಹತ್ತು ನಿಮಿಷಗಳ ಕಾಲ ಮುಂದೂಡಿದ್ದೇನೆ.

(ಸದನವು ಳ.೨೫ಕ್ಕೆ ಹತ್ತು ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)

(ಸದನವು ಮತ್ತೆ ಸಾಯಂಕಾಲ ೫ ಗಂಟೆ ೪ ನಿಮಿಷಕ್ಕೆ ಪುನಃ ಸಮಾವೇಶಗೊಂಡಿತಂ)

ಅಧ್ಯಕ್ಷರು.— ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಳಕ್ಕೆ ಬನ್ನಿ. ಸರ್ಕಾರದ ವತಿಯಿಂದ, ಸಣ್ಣ ಮಂತ್ರಿಯವರಾದ ರಾಚಯ್ಯನವರು ಏನು ಹೇಳುತ್ತಾರೋ ಹೇಳಲಿ.

(ಆ ವೇಳೆಗೆ ಧರಣಿ ಕುಳಿತಿದ್ದ ವಿರೋಧ ಪಕ್ಷದ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು.)

೫-೦೦ ಪಿ. ಎಂ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).— ಸನ್ಮಾನ್ಯ ಸಭಾಧ್ಯಕ್ಷರೇ, ಜನತೆಯ ಸಮಸ್ಯೆಯನ್ನು ಬಗೆಹರಿಸುವುದಕ್ಕೋಸ್ಕರ, ಎರಡುಕಡೆಯಲ್ಲೂ ಕೂಡ ವಿಷಯಗಳನ್ನು ಪ್ರತಿಪಾದಿಸಿದಾಗ ಸ್ವಲ್ಪಮಟ್ಟಿಗೆ ಭಿನ್ನಾಭಿಪ್ರಾಯಂಗಳು ಬಂದು, ಇವತ್ತು ನಮ್ಮ ವಿರೋಧ ಪಕ್ಷದ ಸದಸ್ಯರುಗಳು ಬಾವಿ ಒಳಗೆ ಕುಳಿತುಕೊಳ್ಳುತಕ್ಕಂಥ ಒಂದು ಪರಿಸ್ಥಿತಿ ಬಂತು.

ಶ್ರೀ ಎಂ. ಪುಲ್ಲಿಕಾರ್ಜುನ ಖರ್ಗೆ.— ನೀರಿಲ್ಲದ ಬಾವಿ.

ಶ್ರೀ ಬಿ. ರಾಚಯ್ಯ — ಆದುದರಿಂದ ಬಹುಶಃ ಈ ವಿಷಯದಲ್ಲಿ ಎರಡೂ ಕಡೆಯವರು ಕಲೆತಂ, ಕೂಲಿತುಕೊಂಡು ಮಾತನಾಡಿದಾಗ ಸ್ವಲ್ಪಮಟ್ಟಿಗೆ ಪರಿಹಾರದ ಮಾರ್ಗ ಸಿಕ್ಕಿತು. ಆ ಪರಿಹಾರದ ಮಾರ್ಗ ಏನೆಂದರೆ, ಇವತ್ತು ಯಾರು ಆ ಲಗ್ಗೆರೆ ಗ್ರಾಮಕ್ಕೆ ಸೇರಿದಂಥ ಸ್ಥಳದಲ್ಲಿ ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಆ ಜಾಗವನ್ನು ಸ್ಲಮ್‌ಕ್ಲಿಯರೆನ್ಸ್ ಬೋರ್ಡ್‌ನವರು ತೆಗೆದುಕೊಂಡಿದ್ದಾರೆ. ಅಲ್ಲೇ ಇರತಕ್ಕಂಥವರು ಮತ್ತು ಹೊರಗಡೆ ಇರತಕ್ಕಂಥವರು, ಸೈಟ್ಸ್ ಇಲ್ಲದವರು, ಮನೆ ಇಲ್ಲದವರು, ಸಾಲವನ್ನು ಪಡೆದು ಮನೆಗಳನ್ನು ಕಟ್ಟಿಕೊಂಡಿದ್ದರು, ಅಲ್ಲಿ ಈ ಕೆಲಸವನ್ನು ಮಾಡುವುದಕ್ಕೆ ಹೊರಟ್ಟಿದ್ದರು ಇದು ಅಧಿಕೃತವಾಗಿ ಯಾರಿಗೆ ಅಧಿಕಾರ ಇರಲಿಲ್ಲವೋ ಅವರಿಂದ ಸೈಟ್‌ಗಳನ್ನು ಪಡೆದುಕೊಂಡಿದ್ದರು, ಯಾರು ನಿಜವಾದಂಥ ಅಧಿಕಾರ ಪಡೆದಿದ್ದರು, ಅವರಿಂದ ಜಾಗವನ್ನು ಪಡೆಯದೇ ಇದ್ದುದರಿಂದ ಇಂತಹ ಪರಿಸ್ಥಿತಿ ಬಂತು. ಇಲ್ಲಿ ಅವರ ಮನೆಗಳನ್ನು ಒಡೆದು, ಸರಿಯಾದ ರಸ್ತೆಗಳನ್ನು ಮಾಡಿ, ಒಳಚರಂಡಿ ವ್ಯವಸ್ಥೆಯನ್ನು ಮಾಡಿ ಕುಡಿಯುವ ನೀರಿನ ವ್ಯವಸ್ಥೆಯಂಥ ಮಾಡಿ, ಮನೆಗಳನ್ನು ಕಟ್ಟಿಸಿಕೊಡುವ ದೃಷ್ಟಿಯಿಂದ ಈ ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ನವರು ಈ ಕಾರ್ಯ ಮಾಡಿದ್ದಾರೆ. ಈ ರೀತಿ ಮಾಡುವಾಗ ಮಾನವೀಯ ದೃಷ್ಟಿ ಯಾರಿಗಾದರೂ ಕೂಡಾ ಬರುತ್ತದೆ. ಈ ದೃಷ್ಟಿಯಲ್ಲಿ ಮಾನ್ಯ ಶ್ರೀನಿವಾಸ್‌ರವರು ಈ ವಿಚಾರವನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಕರ್ತವ್ಯ ದೃಷ್ಟಿಯಿಂದ ನಮ್ಮ ಕಾನೂನು ಸಚಿವರು ಇದನ್ನು ಮಾಡಿದ್ದಾರೆ. ಮಾನವೀಯ ದೃಷ್ಟಿಯಿಂದ ಯಾರು ಮನೆಗಳನ್ನು ಕಳೆದುಕೊಂಡಿದ್ದಾರೆ, ಯಾರು ತಮ್ಮ ಸಾಮಾನುಗಳನ್ನು ಕಳೆದುಕೊಂಡಿದ್ದಾರೆ ಅವರಿಗೆ ಅದನ್ನು ವಾಪಸ್ ಕೊಡಿಸಬೇಕೆಂದು ಮಾನ್ಯ ಶ್ರೀನಿವಾಸ್‌ರವರು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಆಮೇಲೆ ಈ ಸರ್ವೆ ನಂಬರ್‌ನಲ್ಲಿ ವ್ಯತ್ಯಾಸ ಆಗಿದೆ, ಯಾರಧಿ ಎಲಿಜಬಲ್ ಇರುತ್ತಾರೆ ಅವರಿಗೆ ಜಾಗ ಕೊಡಬೇಕು.

ಶ್ರೀ ಬಿ. ರಾಚಯ್ಯ.— ಅದನ್ನು ಕೊಡಿಸಬೇಕೆಂದೂ ಹೇಳಿದ್ದಾರೆ. ಈ ಸರ್ವೆ ನಂಬರ್ ೧೧ ಮತ್ತು ೧೧ ರಲ್ಲಿ ಸ್ವಲ್ಪ ವ್ಯತ್ಯಾಸ ಆಗಿದೆ. ಇದನ್ನು ತಪ್ಪಾಗಿ ತಿಳಿದುಕೊಂಡು ಮಾಡಿದ್ದಾರೆಂದು ಹೇಳಿದ್ದಾರೆ. ಇದಕ್ಕೋಸ್ಕರ ಸದನದ ಸಮಿತಿ ಮಾಡುವುದಕ್ಕೆ ಪ್ರತಿಸಾರಿಯೂ ಒಪ್ಪಿಕೊಳ್ಳುವ ಹಾಗೆ ಇದ್ದರೆ, ಸರಕಾರಕ್ಕೆ ಕಷ್ಟವಾಗುತ್ತದೆ. ಇದು ಸರಕಾರವನ್ನು ನಡೆಸಿರತಕ್ಕ ಮಾನ್ಯ ಮೊಯಿಲಿ ಯವರಿಗೂ, ಬಸವಲಿಂಗಪ್ಪನವರಿಗೂ, ಖರ್ಗೆಯವರಿಗೂ ಗೊತ್ತಿರತಕ್ಕ ವಿಷಯ. ಈ ದೃಷ್ಟಿಯಿಂದ ಈ ಕೆಲಸ ಸುಲಲಿತವಾಗಿ ಆಗಬೇಕಾಗಿದ್ದ ಪಕ್ಷದಲ್ಲಿ, ನಾನು ಬೆಂಗಳೂರು ನಗರ ಜಿಲ್ಲೆ ಜಿಲ್ಲಾಧಿಕಾರಿಗಳನ್ನು ಇದರ ಬಗ್ಗೆ ತನಿಖೆ ಮಾಡಲು ನೇಮಿಸಿ, ಅದರ ಜೊತೆಗೆ ಯಾರು ಯಾರಿಗೆ ಸೈಟ್ ಇಲ್ಲ ಯಾರಿಗೆ ಸೈಟ್ ಕೊಡಬೇಕು. ಇದರ ಬಗ್ಗೆ ನನ್ನದೇ ಆದ ತನಿಖೆಯ ಮುಖಾಂತರ ಪತ್ತೆ ಹಚ್ಚಿ ಸಹಾಯ ಮಾಡುವುದಕ್ಕೆ ಏರ್ಪಾಡು ಮಾಡುತ್ತೇನೆ. ಮತ್ತು ಯಾರ ಯಾರ ಮನೆ ಸಾಮಾನುಗಳನ್ನು ತೆಗೆದುಕೊಂಡು ಹೋಗಿದ್ದಾರೆ, ಅವರದ್ದು ಎಷ್ಟು ಸಾಮಾನುಗಳು ಇದ್ದವು, ಅದನ್ನು ವಾಪಸ್ಸು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತು ಯಾರಿಗೆ ಸೈಟ್ ಇಲ್ಲ ಅವರಿಗೆ ಮನೆಗಳನ್ನು ಕಟ್ಟಿ ಕೊಳ್ಳುವುದಕ್ಕೆ ಆದ್ಯತೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ವರದಿ ಬಂದ ಮೇಲೆ ಇದನ್ನು ಮಾಡುತ್ತೇನೆ. ಇದನ್ನು ಸರಕಾರದ ವತಿಯಿಂದ ಮಾಡುತ್ತೇನೆಂದು ಆಶ್ವಾಸನೆಯನ್ನು ಕೊಡುತ್ತೇನೆ. ಆದುದರಿಂದ ಸಭೆಯ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಈ ವಿಷಯ ಇಲ್ಲಿಗೆ ಮುಗಿಯಿತು,

ಶ್ರೀ ಡಿ. ಟಿ. ಜಯಕುಮಾರ್.— ಅಧ್ಯಕ್ಷರೇ, ೫ ಗಂಟೆ ಆಯಿತು, ನವಂಗೆಲ್ಲಾ ಹಸಿವಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.— ಇಂದಿಗೆ ಇವತ್ತಿನ ಕಾರ್ಯಕಲಾಪಗಳನ್ನು ಮುಗಿಸೋಣ.

ಶ್ರೀ ಎಂ. ಪುಲ್ಲಿಕಾರ್ಜುನ ಖರ್ಗೆ.— ನನ್ನದೇ ಆದಂಥ ತನಿಖೆ ಎಂದರೆ ಸಿ. ಓ. ಡಿ. ಮುಖಾಂತರವೊ ಅಥವಾ ಎಸ್. ಪಿ. ಮುಖಾಂತರವೊ ಎಂಬುದನ್ನು ಹೇಳಬೇಕು.

ಶ್ರೀ ಬಿ. ರಾಚಯ್ಯ.-- ಸಿ. ಓ. ಡಿ. ಯಲ್ಲಿ ನಂಬಿಕೆ ಇದ್ದರೆ ಅವರನ್ನು ಹಾಕಿತ್ತೇನೆ. ಇಲ್ಲ ಡಿ. ಸಿ. ಗ್ರೇಡ್‌ನಲ್ಲಿರತಕ್ಕಂಥ ಪೋಲೀಸ್ ಅಧಿಕಾರಿಯಂನ್ನು ಹಾಕುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.-- ಡಿ.ಸಿ. ಮಂತ್ರಿ ಪೋಲೀಸ್ ಅಧಿಕಾರಿ ಇಬ್ಬರನ್ನೂ ಅಪಾಯಿಂಟ್ ಮಾಡಿ ಬಿಟ್ಟರೆ ತಕರಾರು ಇರುವುದಿಲ್ಲ. ಹಾಗೇ ಮಾಡಿ.

ಶ್ರೀ ಬಿ. ರಾಚಯ್ಯ.— ಹಾಗೇ ಮಾಡೋಣ.

ಅಧ್ಯಕ್ಷರು.— ಇಂದಿನ ಸಭೆಯಂನ್ನು ನಾಳೆ ಬೆಳಗ್ಗೆ ೯ ಗಂಟೆಗೆ ಮುಂದೂಡಲಾಗಿದೆ.

ಸದನವು ಸಾಯಂಕಾಲ ೫ ಗಂಟೆ ೦೯ ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ ೭-೩-೧೯೮೬ನೇ ಶನಿವಾರ ಬೆಳಿಗ್ಗೆ ೯-೦೦ ಗಂಟೆಗೆ ಸೇರಲು ನಿರ್ಧರಿಸಿತು.

W. D. 5303